ವಿಜಯಪುರ | ಸಂಪುಟ 04 | ಸಂಚಿಕೆ 180 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ಬುಧವಾರ, ಸೆಪ್ಟೆಂಬರ್, 09, 2026

"ನೈಸ್ ಯೋಜನೆ ಕುರಿತಂತೆ ನಾವು ಏನು ಮಾಡಿದರೂ ಕಾನೂನು ಚೌಕಟ್ಟಿನಲ್ಲೇ ಮಾಡುತ್ತೇವೆ. ಎಲ್ಲವನ್ನೂ ಮರುಪರಿಶೀಲನೆ ಮಾಡುತ್ತಿದ್ದೇವೆ. ಒಂದು ವೇಳೆ ಕಾನೂನು ಉಲ್ಲಂಘನೆಯಾಗಿದ್ದರೆ ದೇವೇಗೌಡರು ಕೋರ್ಟ್ ಗೆ ಹೋಗಲಿ, ಹೋರಾಟ ಮಾಡಲಿ, ಉಪವಾಸ ಮಾಡಲಿ"



■ ಡಿ.ಕೆ.ಶಿವಕುಮಾರ್
ಮುಖ್ಯಮಂತ್ರಿ



## ಬಸ್ ನಿಲ್ದಾಣದಲ್ಲಿ ಕೊಳಚೆ ನೀರಿನ ಸಾಮ್ರಾಜ್ಯ!

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಪಟ್ಟಣದ ಬಸ್ ನಿಲ್ದಾಣದ ಹೊರಭಾಗದಲ್ಲಿ ಕಳೆದ ಸುಮಾರು ಆರು ತಿಂಗಳಿಂದ ಕೊಳಚೆ ನೀರು ರಸ್ತೆಯ ಮೇಲೆ ನಿಂತು ಹರಿಯುತ್ತಿರುವುದರಿಂದ ಪ್ರಯಾಣಿಕರು ತೀವ್ರ ಸಂಕಷ್ಟ ಅನುಭವಿಸುವಂತಾಗಿದೆ.

ಬಸ್ ನಿಲ್ದಾಣಕ್ಕೆ ತೆರಳ ಬೇಕಾದ ಪ್ರಯಾಣಿಕರು ಕೊಳಚೆ ನೀರಿನಲ್ಲಿಯೇ ನಡೆದುಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಹಲವು ದಿನಗಳಿಂದ ನಿಂತಿರುವ ಕೊಳಚೆ ನೀರಿನಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ಗಬ್ಬೆಂದು ದು ರ್ವಾಸನೆ ಹರಡುತ್ತಿದೆ. ಬಸ್‌ಗಾಗಿ ಗಂಟೆಗಟ್ಟಲೆ ಕಾಯುವ ಪ್ರಯಾಣಿಕರು ಮೂಗು ಮುಚ್ಚಿಕೊಂಡು ಕುಳಿತು ಕೊಳ್ಳುವ ಸ್ಥಿತಿ ಎದುರಾಗಿದೆ. ನಿಂತ ನೀರಿನಿಂದ ಸೊಳ್ಳೆಗಳ ಕಾಟವೂ ಹೆಚ್ಚಾಗಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಸಾರ್ವಜನಿಕರನ್ನು ಕಾಡುತ್ತಿದೆ. ಸಾರ್ವಜನಿಕರ ಸಂಚಾರಕ್ಕೆ ಪ್ರಮುಖವಾಗಿರುವ ಬಸ್ ನಿಲ್ದಾಣದ ಸುತ್ತಲಿನ ಪ್ರದೇಶವೇ ಇಂತಹ ಅವ್ಯವಸ್ಥೆಗೆ ಒಳಗಾಗಿರುವುದು ಪಟ್ಟಣದ ಮೂಲಸೌಕರ್ಯ ನಿರ್ವಹಣೆಯ ಬಗ್ಗೆ ಪ್ರಶ್ನೆ ಮೂಡಿಸಿದೆ.

ಚಡಚಣ ಪಟ್ಟಣ ಪಂಚಾಯಿತಿಯ ವ್ಯಾಪ್ತಿಗೆ ಬಸ್ ನಿಲ್ದಾಣದ ಪ್ರದೇಶವೂ ಸೇರಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಪರಿಶೀಲಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಬಸ್ ನಿಲ್ದಾಣದ ಹೊರಭಾಗದ ಚರಂಡಿ ಸಮಸ್ಯೆ ಯಾರ ವ್ಯಾಪ್ತಿಗೆ ಬರುತ್ತದೆ ಎಂಬ ವಿಚಾರದಲ್ಲಿ ಎರಡು ಇಲಾಖೆಗಳ ನಡುವೆ ಭಿನ್ನಾಭಿಪ್ರಾಯ ಮೂಡಿದ್ದು, ಇದರ ಪರಿಣಾಮವನ್ನು ಮಾತ್ರ ಕಳೆದ ಆರು ತಿಂಗಳಿಂದ ಪ್ರಯಾಣಿಕರು ಅನುಭವಿಸುವಂತಾಗಿದೆ. ನಿತ್ಯ ನೂರಾರು ಪ್ರಯಾಣಿಕರು ಸಂಚರಿಸುವ ಬಸ್ ನಿಲ್ದಾಣದ ಪ್ರವೇಶದ್ವಾರದಲ್ಲೇ ಇಂತಹ ಅವ್ಯವಸ್ಥೆ ಮುಂದುವರಿದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಅಧಿಕಾರಿಗಳು ಪರಸ್ಪರ ಹೊಣೆಗಾರಿಕೆ ಆರೋಪಿಸುವುದನ್ನು ಬಿಟ್ಟು, ಸಮನ್ವಯದಿಂದ ಕೂಡಲೇ ಕಾಮಗಾರಿ ಕೈಗೊಂಡು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

"ಚರಂಡಿ ಸಮಸ್ಯೆ ಬಗೆಹರಿಸಲು ಅಗತ್ಯ ಕಾಮಗಾರಿ ಕೈಗೊಳ್ಳಲು ಬಸ್ ನಿಲ್ದಾಣದ ಅಧಿಕಾರಿಗಳ ಅನುಮತಿ ಬೇಕಾಗಿದೆ. ಈ ಕುರಿತು ವಿಜಯಪುರದ ಬಸ್ ವ್ಯವಸ್ಥಾಪಕರಿಗೆ ಪತ್ರ ಬರೆಯಲಾಗುವುದು. ಅನುಮತಿ ದೊರೆತ ನಂತರ ಒಂದು ವಾರದೊಳಗೆ ಶಾಶ್ವತವಾಗಿ ಕೊಳಚೆ ನೀರು ನಿಲ್ಲದಂತೆ ಕ್ರಮ ಕೈಗೊಳ್ಳಲಾಗುವುದು"

■ ಬಾಬಾಸಾಹೇಬ ತಾವಸೆ
ಪಟ್ಟಣ ಪಂಚಾಯಿತಿ ಸಿಇಒ

"ಬಸ್‌ಗಳು ಒಳಹೊರಗೆ ಸಂಚರಿಸುವ ರಸ್ತೆಯಲ್ಲಿ ಕಾಮಗಾರಿ ಕೈಗೊಂಡು ರಸ್ತೆ ಬಂದ್ ಮಾಡಿದರೆ ನಮ್ಮ ಸಂಸ್ಥೆಗೆ ನಷ್ಟ ಉಂಟಾಗುತ್ತದೆ. ಅಲ್ಲದೆ, ವಾಹನ ಸಂಚಾರಕ್ಕೆ ಅಡ್ಡಿಯಾಗಿ ಟ್ರಾಫಿಕ್ ಜಾಮ್ ಉಂಟಾಗುವ ಸಾಧ್ಯತೆಯೂ ಇದೆ. ಇಂತಹ ಕ್ರಮ ಕೈಗೊಳ್ಳುವ ಅಧಿಕಾರ ಚಡಚಣ ಬಸ್ ನಿಲ್ದಾಣದ ಅಧಿಕಾರಿಗಳ ಕೈಯಲ್ಲಿಲ್ಲ. ಚರಂಡಿಯು ಬಸ್ ನಿಲ್ದಾಣದ ಆವರಣದ ಹೊರಗಡೆ ಇದ್ದು, ಅದು ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಆ ಚರಂಡಿಗೂ ನಮ್ಮ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ"

ಪವಾರ ಚಡಚಣ ಬಸ್ ನಿಲ್ದಾಣಾಧಿಕಾರಿ

■ ಆರು ತಿಂಗಳಿಂದ ಚಡಚಣ ಪ್ರಯಾಣಿಕರ ಪರದಾಟ । ಪ.ಪಂ.-ಬಸ್ ನಿಲ್ದಾಣದ ಅಧಿಕಾರಿಗಳ ನಡುವೆ ಹೊಣೆಗಾರಿಕೆಯ ಜಟಾಪಟಿ

# ಬರ ಬಿಸಿ: ರಾಷ್ಟ್ರೀಯ ಹೆದ್ದಾರಿಯಲ್ಲಿ ರೈತರ ಧರಣಿ!



■ ಉದಯರಶ್ಮಿ ದಿನಪತ್ರಿಕೆ

■ ದೇವರಹಿಪ್ಪರಗಿ ಹಾಗೂ ತಾಳಿಕೋಟಿ ಬರಗಾಲ ಪೀಡಿತ ತಾಲ್ಲೂಕುಗಳು ಎಂದು ಘೋಷಿಸುವಂತೆ ಆಗ್ರಹ । ಶಾಸಕ ರಾಜುಗೌಡ ಪಾಟೀಲ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ

ದೇವರಹಿಪ್ಪರಗಿ: ತಾಳಿಕೋಟಿ ಹಾಗೂ ದೇವರಹಿಪ್ಪರಗಿ ಬರಗಾಲ ಪೀಡಿತ ತಾಲ್ಲೂಕುಗಳು ಎಂದು ಘೋಷಿಸುವಂತೆ ಆಗ್ರಹಿಸಿ ಮಂಗಳವಾರ ಶಾಸಕ ರಾಜುಗೌಡ ಪಾಟೀಲ(ಕುದರಿ ಸಾಲವಾಡಗಿ) ನೇತೃತ್ವದಲ್ಲಿ ಜನತಾದಳ(ಎಸ್) ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ಕೈಗೊಂಡು ರಾಷ್ಟ್ರೀಯ ಹೆದ್ದಾರಿಯಲ್ಲಿ ಧರಣಿ ಕುಳಿತು ನಂತರ ತಹಶೀಲ್ದಾರ ನಿಂಗಣ್ಣ ಬಿರಾದಾರ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಮಡಿವಾಳ ಮಾಚಿದೇವರ ದೇವಸ್ಥಾನದ ಮುಂದಿನ ಆರ್‌ಜೆಟಿ ಲೇಔಟ್‌ನಲ್ಲಿ ಸೇರಿದ ಜನತಾದಳ(ಎಸ್) ಕಾರ್ಯಕರ್ತರು ಮೆರವಣಿಗೆ ಹೊರಟು ಅಂಬೇಡ್ಕರ್ ವೃತ್ತದ ರಾಷ್ಟ್ರೀಯ ಹೆದ್ದಾರಿಯಲ್ಲಿ ಧರಣಿ ಕುಳಿತರು.

ಈ ಸಂದರ್ಭದಲ್ಲಿ ಶಾಸಕ ರಾಜುಗೌಡ ಪಾಟೀಲ ಮಾತನಾಡಿ, ಮತಕ್ಷೇತ್ರ 4 ತಾಲ್ಲೂಕುಗಳನ್ನು ಒಳಗೊಂಡಿದ್ದು ಇವುಗಳಲ್ಲಿ ಎರಡು ತಾಲ್ಲೂಕುಗಳನ್ನು ಮಾತ್ರ ಬರಪೀಡಿತ ಪ್ರದೇಶಗಳೆಂದೂ ಗುರುತಿಸಿ ದೇವರಹಿಪ್ಪರಗಿ ಹಾಗೂ ತಾಳಿಕೋಟಿ ತಾಲ್ಲೂಕುಗಳನ್ನು ನಿರ್ಲಕ್ಷಿಸಿದ್ದಾರೆ. ಇದು ರೈತರಿಗೆ ಮಾಡುತ್ತಿರುವ ಅನ್ಯಾಯ. ಕೂಡಲೇ ಮತಕ್ಷೇತ್ರವನ್ನು ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು. ಪ್ರತಿ ಎಕರೆಗೆ 25 ಸಾವಿರ ರೂ ಪರಿಹಾರ ನೀಡಬೇಕು. ಬೆಳೆಸಾಲ ಮನ್ನಾ, ನೀರು ಪೂರೈಕೆ ಹಾಗೂ ಮೇವು ಬ್ಯಾಂಕ್, ಗೋಶಾಲೆಗಳನ್ನು ಆರಂಭಿಸಬೇಕು. ಹಾಗೂ ಎರಡು ತಾಲ್ಲೂಕು ವ್ಯಾಪ್ತಿಯ ನೀರಾವರಿ ಯೋಜನೆ ಪೂರ್ಣಗೊಳಿಸಲು ಅನುದಾನ ಬಿಡುಗಡೆ ಮಾಡಬೇಕು. ಇಲ್ಲವಾದಲ್ಲಿ ಉಗ್ರವಾಗಿ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು. ಮತಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಸಾಯಬಣ್ಣ ಬಾಗೇವಾಡಿ, ಶ್ರೀಶೈಲ ಮುಳಜಿ(ಚಿಕ್ಕರೂಗಿ), ಶಂಕರಗೌಡ ಹಿರೇಗೌಡರ ಮಾತನಾಡಿದರು.

ನಂತರ ಮುಖ್ಯಮಂತ್ರಿಗಳಿಗೆ ತಹಶೀಲ್ದಾರ ಮೂಲಕ ಮನವಿ ಸಲ್ಲಿಸಲಾಯಿತು. ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ರಿಯಾಜ್ ಯಲಗಾರ, ಪಟ್ಟಣ ಪಂಚಾಯಿತಿ ಸದಸ್ಯರಾದ ಕಾಸುಗೌಡ ಬಿರಾದಾರ(ಜಲಕತ್ತಿ), ಶಾಂತಯ್ಯ ಜಡಿಮಠ, ಟಿಪ್ಪು ಕ್ರಾಂತಿಸೇನೆಯ ಮುನೀರ್ ಅಹ್ಮದ್ ಮಳಖೇಡ, ಡಾ.ಆರ್.ಆರ್.ನಾಯಿಕ್, ಸಿ.ಕೆ. ಕುದರಿ, ಸಚೀನಗೌಡ ಪಾಟೀಲ, ಶಾಂತಪ್ಪ ದೇವೂರ, ವೀರೇಶ ಕುದರಿ, ಶ್ರೀಶೈಲ ದೇಸಾಯಿ, ಅರವಿಂದ ನಾಯ್ಕೋಡಿ, ಮಕಬೂಲ್ ಬಾಗವಾನ ಸೇರಿದಂತೆ ರೈತರು ಇದ್ದರು.

### ಹೆದ್ದಾರಿ ತಡೆಯಿಂದ ಪ್ರಯಾಣಿಕರ ಪರದಾಟ

ದೇವರಹಿಪ್ಪರಗಿ ಪಟ್ಟಣದ ರಾಷ್ಟ್ರೀಯ ಹೆದ್ದಾರಿ ಮೇಲೆಯೇ ಮೆರವಣಿಗೆ ಹಾಗೂ ಧರಣಿ ಸುಮಾರು ಒಂದು ಗಂಟೆಗಳ ಕಾಲ ಜರುಗಿತು. ಇದರಿಂದಾಗಿ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ಕಿಲೋಮೀಟರಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತು ಪ್ರಯಾಣಿಕರು ಪರದಾಡುವಂತಾಯಿತು. ಅದರಲ್ಲೂ ದೂರದೂರಿಗೆ ತೆರಳುವ ಪ್ರಯಾಣಿಕರಂತೂ ಬಸವಳಿದು ಹೋಗಿದ್ದರು.

## ಇಂಡಿ ತಾಲೂಕು ಬರಗಾಲ ಪ್ರದೇಶವೆಂದು ಘೋಷಿಸಲು ಆಗ್ರಹ
## ಇಂಡಿಯಲ್ಲಿ ರೈತ ಸಂಘದಿಂದ ಬೃಹತ್ ಪ್ರತಿಭಟನೆ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಕರ್ನಾಟಕ ರೈತ ಸಂಘ ಮತ್ತು ಹಸಿರು ಸೇನೆಯ ವತಿಯಿಂದ ಇಂಡಿ ತಾಲೂಕು ಬರಗಾಲ ಪ್ರದೇಶವೆಂದು ಸಾರಬೇಕೆಂದು ಆಗ್ರಹಿಸಿ ಮಂಗಳವಾರ ನಗರದಲ್ಲಿ ಕರ್ನಾಟಕ ರೈತ ಸಂಘದ ಅಡಿಯಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಪ್ರತಿಭಟನೆಗೆ ಬಿಜೆಪಿ, ಜೆಡಿ ಎಸ್, ಬಸವ ಸಮಿತಿ, ಕೆ ಎಸ್ ಆರ್ ಪಕ್ಷ ತಮ್ಮ ಬೆಂಬಲ ಸೂಚಿಸಿದವು.

ರೈತ ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಬಿ.ಕಂಬೋಗಿ, ಮಾಜಿ ಶಾಸಕ ರವಿಕಾಂತ ಪಾಟೀಲ, ಪ್ರಾಂತ ಸಮಿತಿಯ ಭೀಮರಾಯ ಪೂಜಾರಿ, ಬಿಜೆಪಿ ತಾಲೂಕಾ ಅಧ್ಯಕ್ಷ ಹಣಮಂತರಾಯಗೌಡ ಪಾಟೀಲ, ಜೆಡಿ ತಾಲೂಕಾ ಅಧ್ಯಕ್ಷ ಬಿ.ಡಿ.ಪಾಟೀಲ ಶಂಕರಗೌಡ ಪಾಟೀಲ, ಬಾಳು ಮುಳಜಿ, ಮರೆಪ್ಪ ಗಿರಣಿವಡ್ಡರ ಮಾತನಾಡಿ, ಇಂಡಿ ತಾಲೂಕು ಬರಗಾಲ ಪ್ರದೇಶವೆಂದು ಸಾರಬೇಕು. ಮಳೆಯಿಲ್ಲದೆ ಬೇಳೆ ಸರಿಯಾಗಿ ಬೆಳೆದಿಲ್ಲ. ಮಳೆ ಸರಿಯಾಗಿ ಆಗದ ಕಾರಣ ರೈತರು ಅತೀವ ತೊಂದರೆ ಅನುಭವಿಸುತ್ತಿದ್ದಾರೆ ಎಂದರು.

ಇಂಡಿ ತಾಲೂಕನ್ನು ಬರ ಪೀಡಿತವೆಂದು ಘೋಷಿಸಬೇಕು, ಬರದಿಂದ ಹಾನಿಗೊಳಗಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕು, ಬೆಳೆ ಸಮೀಕ್ಷೆ ತ್ವರಿತವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕು. ರೈತರಿಗೆ ಬೆಳೆ ವಿಮೆ ಹಾಗೂ ಸರಕಾರದ ಪರಿಹಾರವನ್ನು ಶೀಘ್ರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಶ್ರೀಕಾಂತ ಪಾಟೀಲ,ಶಂಕರಗೌಡ ಬಿರಾದಾರ, ಅನೀಲಗೌಡ ಬಿರಾದಾರ, ಮುನ್ನು ನಾಯ್ಕು, ಲಕ್ಷ್ಮಣ ಬಡಿಗೇರ, ಗುರುನಾಥ ಬಗಲಿ, ಹುಲಪ್ಪ ವಠಾರ, ಮಹೇಶ ಶಿವಗದಿಗಿ, ಬಸವರಾಜ ಹಂಚಿಗೆ, ಮಲ್ಲು ಸಾವಕಾರ, ಶಿವಾನಂದ ಯಡಹಳ್ಳಿ, ದೀಪ ಮಾರ್ನೂರ, ಅಶೋಕ ಜಾಧವ, ದುರ್ಗಪ್ಪ ಬೂದಿಹಾಳ ಏನು ಹಿಪ್ಪರಗಿ, ಮುತ್ತುರಾಜ ಹೊನಗೊಂಡ ಮಲ್ಲುಗೌಡ ಬಿರಾದಾರ ಮತ್ತಿತರಿದ್ದರು.

ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟ ಇವರಿಗೆ ಮನವಿ ಸಲ್ಲಿಸಿದರು.

## ಸಮರ್ಪಕ ವಿದ್ಯುತ್ ಪೂರೈಕೆಗೆಗೆ ಆಗ್ರಹಿಸಿ ಕರವೇ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ರೈತರ ಕೃಷಿ ಪಂಪಶೆಟ್ಟುಗಳಿಗೆ ಸಮರ್ಪಕ ಹಾಗೂ ನಿಗದಿತ ಸಮಯದಲ್ಲಿ ವಿದ್ಯುತ್ ಪೂರೈಕೆ ಆಗ್ರಹಿಸಿ ಕ ರ ವೇ ಕಾರ್ಯಕರ್ತರು ಹೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕರವೇ ಅಧ್ಯಕ್ಷ ಬಾಳು ಮುಳಜಿ ಮಾತನಾಡಿ, ಧನಶೆಟ್ಟಿ ತಾಂಡಾ ಫೀಡರ್ ಮೇಲೆ ಬರುವ ರೈತರಿಗೆ ಮೂರು ಫೇಸ್ ವಿದ್ಯುತ್ ಸರಿಯಾಗಿ ಪೂರೈಕೆ ಆಗುತ್ತಿಲ್ಲ, ಅದರಂತೆ ತಾಲೂಕಿನ ಎಲ್ಲ ಕಡೆಯೂ ಇದೇ ಪರಿಸ್ಥಿತಿ ಇದೆ. ಕೆಈ ಬಿಯವರಿಗೆ ಕೇಳಿದರೆ ಜಾಸ್ತಿ ಲೋಡ ಇರುವದರಿಂದ ಆಗುತ್ತಿದೆ ಎಂದು ಹೇಳುತ್ತಾರೆ. ಪದೇ ಪದೇ ಉಂಟಾಗುವ ವಿದ್ಯುತ್ ಕಡಿತವನ್ನು ತಕ್ಷಣ ತಡೆಗಟ್ಟಬೇಕು. ಹಾಳಾದ ಟ್ರಾನ್ಸಫರ್ಮರ ತ್ವರಿತವಾಗಿ ಬದಲಾಯಿಸಬೇಕು. ವಿದ್ಯುತ್ ಕಂಬ ಮತ್ತು ದುರಸ್ತಿ ಕಾರ್ಯ ತುರ್ತಾಗಿ ಕೈಕೊಳ್ಳಬೇಕು ರೈತರಿಗೆ ಹಗಲು ವೇಳೆ ಸಾಧ್ಯವಾದಷ್ಟು ಹೆಚ್ಚಿನ ವಿದ್ಯುತ್ ಪೂರೈಕೆ ಆಗಬೇಕು ಎಂದರು.

ಸುನೀಲಗೌಡ ಬಿರಾದಾರ, ಅಪ್ಪು ಮಸಳಿ, ಮಹೇಶ ಹೂಗಾರ, ಪ್ರಶಾಂತ ಲಾಳಸಂಗಿ, ಸುನೀಲ ಹಿರೇಮಠ, ಮಿಥುನ ರಾಠೋಡ, ಹಿರಾಸಿಂಗ ಜಾಧವ, ಅಶೋಕ ರಾಠೋಡ, ಖುಬಸಿಂಗ ರಾಠೋಡ, ರಮೇಶ ವಾಲಿಕಾರ, ರೇವಣ್ಣ ತಮಶೆಟ್ಟಿ, ಶ್ರೀಶೈಲ ಮೇತ್ರಿ ಸಗಾರ ಬಿರಾದಾರ ಮತ್ತಿತರಿದ್ದರು.

ಹೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.



# ರಸ್ತೆಯೂ ಇಲ್ಲ, ದೇವ್ರೂ ಸಿಗ್ಲಿಲ್ಲ: ರೂ, 3 ಲಕ್ಷದ 'ಮಧ್ಯಂತರ' ತಮಾಷೆ!

## ಹೈದ್ರಾ ತಾಂಡಾದಲ್ಲಿ ನಿರ್ಮಿಸಿದ ರೂ.3 ಲಕ್ಷದ ರಸ್ತೆಗೆ ಎರಡೂ ಕಡೆ 'ಎಕ್ಸಿಟ್' ಇಲ್ಲ । ಅಧಿಕಾರಿಗಳ ತ್ರಿಶಂಕು ರಸ್ತೆಗೆ ಗ್ರಾಮಸ್ಥರ ಆಕ್ರೋಶ

■ ಉದಯರಶ್ಮಿ ದಿನಪತ್ರಿಕೆ

ಅಫಜಲಪುರ/ಮಾಶಾಳ: ಕರ್ನಾಟಕ-ಮಹಾರಾಷ್ಟ್ರ ಗಡಿ ಭಾಗದ ಮಾಶಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೈದ್ರಾ ತಾಂಡಾದಲ್ಲಿ ಸಾರ್ವಜನಿಕರ ತೆರಿಗೆ ಹಣಕ್ಕೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಮಂಕುಬೂದಿ ಎರಚಿದ ನಿದರ್ಶನವೊಂದು ಬೆಳಕಿಗೆ ಬಂದಿದೆ.

ತಾಲ್ಲೂಕು ಯುನೈಟೆಡ್ (United/Untied Grants) ಯೋಜನೆಯಡಿ ಬಿಡುಗಡೆಯಾದ ರೂ. 3 ಲಕ್ಷ ಅನುದಾನದಲ್ಲಿ ನಿರ್ಮಿಸಲಾದ ಸಿ.ಸಿ. ರಸ್ತೆ ಕಾಮಗಾರಿ 'ಇತ್ತ ದಡವೂ ಇಲ್ಲ, ಅತ್ತ ದಾರಿಯೂ ಇಲ್ಲ' ಎಂಬಂತಾಗಿ ಹಳ್ಳ ಹಿಡಿದಿದೆ.

ತಾಂಡಾದ ಮುಖ್ಯ ರಸ್ತೆಯಿಂದ ಪವಿತ್ರ ಸೇವಾಲಾಲ್ ದೇವಸ್ಥಾನದವರೆಗೆ ಸುಗಮ ಸಂಚಾರ ಕಲ್ಪಿಸುವ ಉದ್ದೇಶದಿಂದ ಈ ಸಿ.ಸಿ. ರಸ್ತೆ ಮಂಜೂರಾಗಿತ್ತು. ಆದರೆ ವಾಸ್ತವದಲ್ಲಿ ನಡೆದಿರುವುದೇ ಬೇರೆ. ನಿರ್ಮಿಸಲಾದ ಸಿಮೆಂಟ್ ರಸ್ತೆ ಮುಖ್ಯ ರಸ್ತೆಯನ್ನೂ ತಲುಪಿಲ್ಲ, ಅತ್ತ ದೇವಸ್ಥಾನದ ಆವರಣಕ್ಕೂ ಮುಟ್ಟಿಲ್ಲ. ರಸ್ತೆಯ ಎರಡೂ ಬದಿಯ ಸಂಪರ್ಕ ಕಡಿತಗೊಂಡಿದ್ದು, ಗ್ರಾಮದ ಮಧ್ಯಭಾಗದಲ್ಲಿ ತುಂಡು ರಸ್ತೆಯೊಂದನ್ನು ನಿರ್ಮಿಸಿ ಕೈತೊಳೆದುಕೊಳ್ಳಲಾಗಿದೆ.

### ಮಳೆ ಬಂದರೆ ನರಕಯಾತನೆ

ಮುಖ್ಯ ರಸ್ತೆಯಿಂದ ಹೊಸದಾಗಿ ಮಾಡಿದ ಸಿ.ಸಿ. ರಸ್ತೆಯವರೆಗೆ ಇರುವ ಜಾಗದಲ್ಲಿ ಬೃಹತ್ ಗುಂಡಿಗಳು ಬಿದ್ದಿದ್ದು, ಕೇವಲ ಕೆಸರು-ಮಣ್ಣು ತುಂಬಿಕೊಂಡಿದೆ. ಸಣ್ಣ ಮಳೆಯಾದರೂ ಸಾಕು, ಜನಸಾಮಾನ್ಯರು ಆ ಗುಂಡಿಗಳಲ್ಲಿ ಬಿದ್ದು ಒದ್ದಾಡುವಂತಾಗಿದೆ. ವೃದ್ಧರು, ಮಹಿಳೆಯರು ಹಾಗೂ ಶಾಲಾ ಮಕ್ಕಳು ದೇವಸ್ಥಾನಕ್ಕಾಗಲಿ ಅಥವಾ ಮುಖ್ಯ ರಸ್ತೆಗಾಗಲಿ ಹೋಗಲು ಹರಸಾಹಸ ಪಡಬೇಕಿದೆ. ಮುಖ್ಯ ರಸ್ತೆಗೆ ಹಾರಿಕೊಂಡು ಹೋಗ್ಬೇಕಾ, ದೇವಸ್ಥಾನಕ್ಕೆ ಜಿಗಿದುಕೊಂಡು ಹೋಗ್ಬೇಕಾ? "ಲಕ್ಷಾಂತರ ರೂಪಾಯಿ ಖರ್ಚು ಮಾಡಿ ರಸ್ತೆ ನಿರ್ಮಿಸಿದರೂ ನಮಗೆ ಕೆಸರೇ ಗತಿಯಾಗಿದೆ" ಎಂದು ತಾಂಡಾದ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

"ಸೇವಾಲಾಲ್ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಅನುಕೂಲವಾಗಲಿ ಎಂದು ರಸ್ತೆ ಕೇಳಿದರೆ, ಅಧಿಕಾರಿಗಳು ಮುಖ್ಯ ರಸ್ತೆಗೂ ಜೋಡಿಸದೆ ಮಧ್ಯದಲ್ಲೇ ಬಿಟ್ಟು ಹೋಗಿದ್ದಾರೆ. ಈ ಕಳಪೆ ಕಾಮಗಾರಿಯ ಸಮಗ್ರ ತನಿಖೆಯಾಗಬೇಕು, ಸ್ಥಳ ಪರಿಶೀಲನೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಂಡು ರಸ್ತೆಯನ್ನು ಪೂರ್ಣಗೊಳಿಸಬೇಕು" ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

### ಕಿರು ರಸ್ತೆಗಳ ನೆಪದಲ್ಲಿ 'ಕಮಿಷನ್' ದಂಧೆ?

ಗ್ರಾಮೀಣ ಭಾಗಗಳಲ್ಲಿ ರೂ. 2 ರಿಂದ ರೂ. 3 ಲಕ್ಷದಂತಹ ಸಣ್ಣ ಮೊತ್ತದ ಯೋಜನೆಗಳನ್ನು ರೂಪಿಸಿ, ತಪಾಸಣೆಯಿಂದ ತಪ್ಪಿಸಿಕೊಳ್ಳಲು ಅಧಿಕಾರಿಗಳು ಹೊಸ ತಂತ್ರ ರೂಪಿಸಿದ್ದಾರೆಯೇ ಎಂಬ ಬಲವಾದ ಅನುಮಾನ ಮೂಡಿದೆ.

ಇಂತಹ ಕಿರು ರಸ್ತೆಗಳ ಹೆಸರಿನಲ್ಲಿ ಅಂದಾಜು ಪತ್ರಿಕೆ (Estimate) ತಯಾರಿಸಿ, ಅರ್ಧಂಬರ್ಧ ಕಾಮಗಾರಿ ನಡೆಸಿ ಪೂರ್ಣ ಹಣ ಲಪಟಾಯಿಸುವ 'ಕಮಿಷನ್ ಜಾಲ' ಗಡಿ ಭಾಗದಲ್ಲಿ ಸಕ್ರಿಯವಾಗಿರುವ ಶಂಕೆ ವ್ಯಕ್ತವಾಗಿದೆ.

ಸ್ಥಳೀಯ ಪಂಚಾಯತ್ ರಾಜ್ ಇಂಜಿನಿಯರಿಂಗ್ (PRED) ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸದೆ ಬಿಲ್ ಮಂಜೂರು ಮಾಡಿದ್ದು ಹೇಗೆ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಎದ್ದಿದೆ.

### ಕಾಮಗಾರಿ ಮುಗಿಯುವ ಮುನ್ನವೇ ಕಿತ್ತುಹೋದ ಕಾಂಕ್ರೀಟ್

ನಿರ್ಮಿಸಲಾಗಿರುವ ಅಲ್ಪಸ್ವಲ್ಪ ರಸ್ತೆಯಲ್ಲೂ ಗುಣಮಟ್ಟಕ್ಕೆ ಕವಡೆ ಕಾಸಿನ ಕಿಮ್ಮತ್ತು ನೀಡಿಲ್ಲ ಎಂಬುದು ಮೇಲ್ನೋಟಕ್ಕೇ ಸಾಬೀತಾಗುತ್ತಿದೆ. ಕಾಮಗಾರಿ ನಡೆದು ಕೆಲವೇ ದಿನಗಳಲ್ಲಿ ಕಾಂಕ್ರೀಟ್ ಅಲ್ಲಲ್ಲಿ ಕಿತ್ತಿಹೋಗಿದ್ದು, ಜಲ್ಲಿಕಲ್ಲುಗಳು ಮೇಲೆದ್ದಿವೆ. ಕ್ಯೂರಿಂಗ್ (ನೀರುಣಿಸುವುದು) ಸರಿಯಾಗಿ ಮಾಡದೆ, ಸಿಮೆಂಟ್-ಮರಳಿನ ಪ್ರಮಾಣದ ನಿಯಮಗಳನ್ನು ಗಾಳಿಗೆ ತೂರಿ ಕಾಮಗಾರಿ ಮುಗಿಸಲಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ.








**ಕಲಬುರಗಿ: ನಗರದ ಕೆಕೆಸಿಸಿಐ ಸಭಾಂಗಣದಲ್ಲಿ ಸರ್ಕಾರಿ, ಅರೆ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಥಟ್ ಅಂತ ಹೇಳಿ ಖ್ಯಾತಿಯ ಲೇಖರ ನಾ.ಸೋಮೇಶ್ವರ, ಶಾಸಕರಾದ ಅಲ್ಲಮಪ್ರಭು ಪಾಟೀಲ,ಶರಣಬಸಪ್ಪ ದರ್ಶನಾಪೂರ, ಪೊಲೀಸ್ ಆಯುಕ್ತರಾದ ಡಾ. ಶರಣಪ್ಪ ಎಸ್.ಡಿ., ಶರಣು ಪಪ್ಪ, ಬಿ.ಎಸ್.ದೇಸಾಯಿ, ಚಂದ್ರಕಾಂತ ಎನ್, ಡಿ. ಕಾಚಾಪುರ, ಚಂದ್ರಾಮ ಹುಬ್ಬಳ್ಳಿ ಸೇರಿದಂತೆ ಹಲವರಿದ್ದರು.**



## ರೋಟರಿ ಕ್ಲಬ್ ಆಫ್ ಗುಲ್ಬರ್ಗಾ ನಾರ್ತ್ ವತಿಯಿಂದ ಶಿಕ್ಷಕರ ದಿನಾಚರಣೆ

ಕಲಬುರಗಿ: ರೋಟರಿ ಕ್ಲಬ್ ಆಫ್ ಗುಲ್ಬರ್ಗಾ ನಾರ್ತ್ ವತಿಯಿಂದ ಅಧ್ಯಕ್ಷ ರೋಟೇರಿಯನ್ ಸುಹಾಸ್ ಖಣಗೆ ಹಾಗೂ ಕಾರ್ಯದರ್ಶಿ ರೋಟೇರಿಯನ್ ಪ್ರಶಾಂತ್ ಚಿದ್ಗುಪ್ಕರ್ ಅವರ ನೇತೃತ್ವದಲ್ಲಿ ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಅಮೂಲ್ಯ ಕೊಡುಗೆ ಹಾಗೂ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ, ಸಮರ್ಪಿತ ಶಿಕ್ಷಕರನ್ನು "ನ್ಯಾಷನ್ ಬಿಲ್ಡರ್ ಅವಾರ್ಡ್" ನೀಡಿ ಗೌರವಿಸಲಾಯಿತು.

ಮುಖ್ಯ ಅತಿಥಿ ಸಂಜಯ್ ಮಾಕಲ್ ಅವರು ಶಿಕ್ಷಕರ ಸಮರ್ಪಣೆ, ತ್ಯಾಗ ಮತ್ತು ಜವಾಬ್ದಾರಿಯ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಇಕಮಿಂಗ್ ೦ಉ 2027-28 ರೋಟೇರಿಯನ್ ರಾಮಚಂದ್ರ ಶಾನಭೋಗ್ ಅವರನ್ನು ಸಹ ಗೌರವಿಸಲಾಯಿತು.

ಕಾರ್ಯಕ್ರಮದ ಪ್ರಾಜೆಕ್ಟ್ ಚೇರ್ಮನ್ ರೋಟೇರಿಯನ್ ಲಿಂಗರಾಜ್ ಭಾವಿಕಟ್ಟಿ ಅವರು ವಿಶೇಷ ಸಹಕಾರ ನೀಡಿ ಫೆಲೋಶಿಪ್ ವ್ಯವಸ್ಥೆ ಮಾಡಿದರು. ನೌಶ್ಯಾದ್ ಇರಾನಿ ಅವರು ಕಾರ್ಯಕ್ರಮದ ನಿರೂಪಕರಾಗಿ ಕಾರ್ಯನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಖಜಾಂಚಿ ರೋಟೇರಿಯನ್ ನಿತಿನ್ ತುಸೆ, ಖಕಕ ರೋಟೇರಿಯನ್ ಆನಂದ್ ದಂಡೋತಿ, ರೋಟೇರಿಯನ್ ಸಂಪತ್ ತಪಾಡಿಯಾ, ರೋಟೇರಿಯನ್ ಶಿವಾನಂದ್ ಬೆಳೂರೆ, ರೋಟೇರಿಯನ್ ಶ್ರೀಶೈಲ್ ಘತಾಟೆ, ರೋಟೇರಿಯನ್ ಶರ್ಣು ಪಾಟೀಲ್, ರೋಟೇರಿಯನ್ ಅರವಿಂದ್ ಘಂಟೋಜಿ, ರೋಟೇರಿಯನ್ ತನ್ಮಯ್ ಶಾ, ರೋಟೇರಿಯನ್ ವೈಜಿನಾಥ್ ಪಾಟೀಲ್, ರೋಟೇರಿಯನ್ ಅಭಿಜೀತ್ ಪಾಡಶೆಟ್ಟಿ ಹಾಗೂ ರೋಟೇರಿಯನ್ ನಾರಾಯಣ ಜಹಾಗೀರ್ದಾರ್ ಸೇರಿದಂತೆ ಹಲವು ರೋಟೇರಿಯನ್ಸ್ ಉಪಸ್ಥಿತರಿದ್ದರು.

# ವಿಜಯಕುಮಾರ ಪಾಟೀಲ ಅವರಿಗೆ ನಾಡಪ್ರಭು ಕೆಂಪೇಗೌಡ ರಾಜ್ಯ ಪ್ರಶಸ್ತಿ

ಬೆಂಗಳೂರು: ಸಾಮಾಜಿಕ, ಕೃಷಿ, ಶಿಕ್ಷಣ ಹಾಗೂ ಉದ್ಯಮ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಬೀದರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ವಿಜಯಕುಮಾರ ಎಸ್. ಪಾಟೀಲ ಗಾದಗಿ ಅವರಿಗೆ ಪ್ರತಿಷ್ಠಿತ 'ನಾಡಪ್ರಭು ಶ್ರೀ ಕೆಂಪೇಗೌಡ ರಾಜ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಸಮರ್ಥ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾಜಮುಖಿ ಕಾರ್ಯಗಳು, ಕೃಷಿ ಕ್ಷೇತ್ರಕ್ಕೆ ನೀಡಿದ ಕೊಡುಗೆ, ಶಿಕ್ಷಣ ಕ್ಷೇತ್ರದ ಸೇವೆ ಹಾಗೂ ಉದ್ಯಮದ ಮೂಲಕ ಉದ್ಯೋಗ ಸೃಷ್ಟಿ ಮತ್ತು




ಸಮಾಜದ ಅಭಿವೃದ್ಧಿಗೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ವಿಜಯಕುಮಾರ ಎಸ್. ಪಾಟೀಲ ಗಾದಗಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಪದಾಧಿಕಾರಿಗಳು ತಿಳಿಸಿದರು.

# ಸ್ವತಂತ್ರವಾಗಿ ಬದುಕಿದ ಪೂಜ್ಯ ಡಾ.ಅಪ್ಪ

ಕಲಬುರಗಿ :ಪೂಜ್ಯ ಡಾ.ಶರಣಬಸವಪ್ಪ ಅಪ್ಪ ಅವರು ಸ್ವತಂತ್ರವಾಗಿ ಬದುಕಿದ ಮಹಾದಾರ್ಶನಿಕರು ಎಂದು ಶರಣಬಸವ ವಿವಿಯ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ.ಚಿದಾನಂದ ಚಿಕ್ಕಮಠ ಹೇಳಿದರು.



ಅಖಿಲ ಭಾರತ ಶಿವಾನುಭವ ಮಂಟಪ ಶರಣಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ 40 ದಿನಗಳ ಉಪನ್ಯಾಸ ಮಾಲಿಕೆಯಲ್ಲಿ ರವಿವಾರ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಸ್ವಾತಂತ್ರ್ಯ ಪರಿಕಲ್ಪನೆ ವಿಷಯ ಕುರಿತು ಮಾತನಾಡಿ, ಪೂಜ್ಯರ ಸ್ವಾತಂತ್ರ್ಯ ಪರಿಕಲ್ಪನೆ ಕಠಿಣ ಪರಿಶ್ರಮ ಮತ್ತು ಸಂಪಾದಿಸಿದ ನೈಜತೆಯಾಗಿದೆ. ಸ್ವಾತಂತ್ರ್ಯ ಎಂದರೆ ಕೇವಲ ಬಂಧನಗಳಿಂದ ಮುಕ್ತವಾಗಿರುವುದಲ್ಲ. ವ್ಯಕ್ತಿಯು ತನ್ನ ವಿಚಾರ, ಜ್ಞಾನ, ವಿವೇಕ ಮತ್ತು ಸಾಮರ್ಥ್ಯವನ್ನು ಸ್ವತಂತ್ರವಾಗಿ ಬಳಸಿಕೊಂಡು ಗೌರವಯುತವಾಗಿ ಬದುಕುವ ಅವಕಾಶವೇ ನಿಜವಾದ ಸ್ವಾತಂತ್ರ್ಯ.

ಈ ದೃಷ್ಟಿಯಿಂದ ನೋಡಿದಾಗ, ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಜ್ಞಾನ, ಶಿಕ್ಷಣ, ಸಮಾನತೆ, ಸ್ವಾವಲಂಬನೆ ಮತ್ತು ಮಾನವೀಯ ಸೇವೆಯೊಂದಿಗೆ ಜೋಡಿಸಬಹುದು. ಪೂಜ್ಯ ಡಾ. ಅಪ್ಪ ಅವರ ಜೀವನ ಮತ್ತು ಕಾರ್ಯಗಳನ್ನು ಆಧರಿಸಿ ಸ್ವಾತಂತ್ರ್ಯದ ಪರಿಕಲ್ಪನೆ 'ಅನ್ನದಿಂದ ದೇಹಕ್ಕೆ ಸ್ವಾತಂತ್ರ್ಯ, ಜ್ಞಾನದಿಂದ ಮನಸ್ಸಿಗೆ ಸ್ವಾತಂತ್ರ್ಯ, ಶಿಕ್ಷಣದಿಂದ ಬದುಕಿಗೆ ಸ್ವಾವಲಂಬನೆ, ಸಮಾನತೆಯಿಂದ ಸಮಾಜಕ್ಕೆ ಸ್ವಾತಂತ್ರ್ಯ ಮತ್ತು ದಾಸೋಹದಿಂದ ಮಾನವೀಯತೆಗೆ ಅರ್ಥವಾಗಿದೆ. ಸ್ವತಂತ್ರವಾಗಿ ವಿಚಾರ ಮಾಡಬೇಕು, ಸ್ವತಂತ್ರವಾಗಿ ಸ್ವತಂತ್ರವಾಗಿ ಮಾತನಾಡಬೇಕು, ಸ್ವತಂತ್ರವಾಗಿ ಬದುಕಬೇಕು ಎಂಬುವುದು ಪೂಜ್ಯರ ನಿರಂತರ ಸಂದೇಶವಾಗಿತ್ತು. ಮಹಿಳಾ ಸಬಲೀಕರಣ ಮಾಡುವುದರ ಮೂಲಕ ಮಹಿಳೆಯರಿಗೆ ನೀಡಿದ ಸ್ವತಂತ್ರ್ಯವಾಗಿತ್ತು. ಕಾಯಕ ಮತ್ತು ದಾಸೋಹದ ಮೂಲಕ ಸ್ವಾತಂತ್ರ್ಯದೊರಕಿಸಿದರು. ಅವರು ತಮ್ಮ ಜೀವನದುದ್ದಕ್ಕೂ ಸ್ವತಂತ್ರವಾಗಿ ಬದುಕಿದವರು. ಸ್ವತಂತ್ರ ವಿಶ್ವವಿದ್ಯಾಲಯ ನಿರ್ಮಿಸಿದ ಮಹಾ ಮೇಧಾವಿ. ದೇಶ ಸ್ವಾತಂತ್ರ್ಯ ಸಿಕ್ಕ ದಿನವೇ ಅವರು ದೇಹತ್ಯಾಗ ಮಾಡಿರುವುದು ಕಾಕತಾಳಿಯವಾಗಿದೆ. ಹೀಗಾಗಿ ಅವರ ಸ್ವಾತಂತ್ರ್ಯಪರಿಕಲ್ಪನೆ ದಾಸೋಹವು ವ್ಯಕ್ತಿಯ ಮುಕ್ತಿಯಿಂದ ಸಮಾಜದ ಮುಕ್ತಿಯವರೆಗೆ ಸಾಗುವ ಮಾನವೀಯ ಚಿಂತನೆಯಾಗಿದೆ. ಇದೇ ಕಾರಣಕ್ಕೆ ಅವರ ದಾಸೋಹ ಪರಂಪರೆ ಇಂದಿಗೂ ಸಮಾಜಕ್ಕೆ ಪ್ರೇರಣೆಯಾಗಿದೆ ಎಂದು ಹೇಳಿದರು.

# ಬಂಜಾರಾ ಸಾಧಕರಿಗೆ ಹಾಗೂ ಗೌರವ ಡಾಕ್ಟರೇಟ್ ಪುರಸ್ಕೃತರಿಗೆ ಸನ್ಮಾನ

ಕಲಬುರಗಿ: ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಬಂಜಾರಾ ಸಮುದಾಯದ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯ ಶ್ಲಾಘನೀಯವಾಗಿದ್ದು, ಇಂತಹ ಸಾಧಕರಿಂದ ಯುವಜನತೆ ಪ್ರೇರಣೆ ಪಡೆಯಬೇಕು ಎಂದು ಗಣ್ಯರು ಅಭಿಪ್ರಾಯಪಟ್ಟರು.

ನಗರದ ಬಂಜಾರಾ ಭವನದಲ್ಲಿ ಬಂಜಾರಾ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕ, ಪ್ರದೇಶ ಬಂಜಾರ ಸೇವಾ ಸಂಘ ಹಾಗೂ ವಿವಿಧ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಯಿತು.



ಅಮೆರಿಕನ್ ವಿಸ್ಡಂ ಪೀಸ್ ಯೂನಿವರ್ಸಿಟಿ ಅಸೋಸಿಯೇಷನ್ ಆಫ್ ಇಂಟರ್‌ನ್ಯಾಷನಲ್ ಕಾಲೇಜ್ ಇನ್ ಟೆಕ್ನಿಕಲ್ ಎಜುಕೇಶನ್, ಯುಎಸ್‌ಎ ವತಿಯಿಂದ ಗೌರವ ಡಾಕ್ಟರೇಟ್ ಪಡೆದ ಶ್ರೀ ಅನಿಲ್ ಸಾಹೇಬ್ ಮಹಾರಾಜ (ತರಿತಾಂಡ) ಅವರನ್ನು ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದ ಸಾಧನೆಗಾಗಿ, ಶ್ರೀ ಬಿ.ಬಿ. ನಾಯಕ್ ಅವರನ್ನು ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದ ಸಾಧನೆಗಾಗಿ, ಆಲ್ ಇಂಡಿಯಾ ಬಂಜಾರಾ ಸಂದೇಶ್ ಟಿವಿ ಸಂಸ್ಥಾಪಕ ಶ್ರೀ ಸುಭಾಷ್ ಚವಾಣ್ ಅವರನ್ನು ಮಾಧ್ಯಮ ಮತ್ತು ಪತ್ರಿಕೋದ್ಯಮ ಕ್ಷೇತ್ರದ ಸಾಧನೆಗಾಗಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಸಲಹೆಗಾರರಾಗಿ ಆಯ್ಕೆಯಾದ ಶ್ರೀ ಪ್ರೇಮ್ ಸಿಂಗ್ ಚೌಹಾಣ್ ಹಾಗೂ ವೃತ್ತಿಯಿಂದ ನಿವೃತ್ತರಾದ ಶ್ರೀ ಗುರುನಾಥ್ ರಾಥೋಡ್ ಅವರನ್ನು ಸಹ ಸನ್ಮಾನಿಸಲಾಯಿತು.

ಕಾರ್ಯಕ್ರಮಕ್ಕೆ ಕೆಸರಟಗಿ ಸುಕ್ಷೇತ್ರದ ಪರಮಪೂಜ್ಯ ಮಾತೋಶ್ರೀ ಲತಾದೇವಿ ಹಾಗೂ ನವಶಕ್ತಿ ಪೀಠದ ಶ್ರೀ ಮುರಹರಿ ಮಹಾರಾಜರು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಬಂಜಾರಾ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಬು ಎಂ. ಜಾಧವ ಪ್ರಾಸ್ತಾವಿಕವಾಗಿ ಮಾತನಾಡಿ, ಬಂಜಾರ ನೌಕರರ ಸಂಘವು ಸುಮಾರು 45 ವರ್ಷಗಳಿಂದ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಸಮಾಜದ ಶ್ರೇಯೋಭಿವೃದ್ಧಿಗಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಎಲೆಮರೆಯ ಕಾಯಿಯಂತೆ ಸಮಾಜ ಸೇವೆ ಸಲ್ಲಿಸುತ್ತಿರುವ ಸಾಧಕರನ್ನು ಗುರುತಿಸಿ ಗೌರವಿಸುವುದು ಸಂಘದ ಪ್ರಮುಖ ಉದ್ದೇಶವಾಗಿದೆ ಎಂದರು. ಸಂಘದ ಜಿಲ್ಲಾಧ್ಯಕ್ಷ ಹರಿಶ್ಚಂದ್ರ ಎಸ್. ರಾಥೋಡ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಂಜಾರ ನೌಕರರ ಸಂಘವು ನಿರಂತರವಾಗಿ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮೌಲ್ಯಾಧಾರಿತ ಸಮಾಜ ನಿರ್ಮಾಣ ಹಾಗೂ ಸಮಾಜದ ಜಾಗೃತಿಗಾಗಿ ಶ್ರಮಿಸುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ತಾರಾನಾಥ್ ಚವ್ಹಾಣ, ಎಸ್.ಎಂ. ರಾಠೋಡ್, ಕೆ.ಎಸ್. ನಾಯಕ್ ರಾಥೋಡ್, ಸತೀಶ್ ಚವ್ಹಾಣ, ಸೋಮು ರಾಥೋಡ್, ಸಂತೋಷ್ ಚವ್ಹಾಣ, ರಾಜೇಂದ್ರ ರಾಥೋಡ್, ದೇವಿದಾಸ್ ಚವ್ಹಾಣ, ಗೋಪಾಲ್ ರಾಥೋಡ್, ಅನಿಲ್ ಚವ್ಹಾಣ, ರಾಕೇಶ್ ಚವ್ಹಾಣ, ಖೇಮಸಿಂಗ್ ಪವರ್ ಸೇರಿದಂತೆ ಸಮಾಜದ ಗಣ್ಯರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ನೌಕರ ಬಂಧುಗಳು ಉಪಸ್ಥಿತರಿದ್ದರು.

# ಶರಣ ತತ್ವ ಜೀವಂತಿಕೆಗೆ ಜನಪದರ ಕೊಡುಗೆ ಅಪಾರ

ಕಲಬುರಗಿ: ಜನಪದ ಸಾಹಿತ್ಯದಲ್ಲಿ ಬಸವಾದಿ ಶರಣರ ಚಿತ್ರಣ ಅತ್ಯಂತ ಆಪ್ತ ಹಾಗೂ ಗೌರವಾನ್ವಿತ ಸ್ಥಾನವನ್ನು ಪಡೆದಿದೆ. 12ನೇ ಶತಮಾನದ ಶರಣ ಚಳವಳಿಯು ಕೇವಲ ಲಿಖಿತ ವಚನ ಸಾಹಿತ್ಯಕ್ಕೆ ಸೀಮಿತವಾಗದೆ, ಸಾಮಾನ್ಯ ಜನರ ಆಡುಭಾಷೆಯಾದ ಜಾನಪದ ಗೀತೆಗಳಲ್ಲಿ ಅಮರವಾಗಿದೆ. ಜನಪದರು, ಲೇಖಕರು, ವಿದ್ವಾಂಸರು ಹಾಗೂ ಗ್ರಾಮೀಣ ಗಾಯಕರು ಬಸವಾದಿ ಶರಣರ ತತ್ವಗಳನ್ನು ತ್ರಿಪದಿಗಳು, ಡೊಳ್ಳು, ಭಜನಾ, ಕುಟ್ಟುವ, ಬೀಸುವ, ಹಂತಿ ಪದಗಳು, ಜನಪದ ಮಹಾಕಾವ್ಯಗಳು, ಕಥೆಗಳು ಸೇರಿದಂತೆ ಇನ್ನಿತರ ಜಾನಪದ ಕಲೆಗಳ ಮೂಲಕ ಜೀವಂತವಾಗಿರಿಸಿದ್ದಾರೆ ಎಂದು ಉಪನ್ಯಾಸಕ, ಶರಣ ಚಿಂತಕ ಎಚ್.ಬಿ.ಪಾಟೀಲ್ ಅಭಿಮತ ವ್ಯಕ್ತಪಡಿಸಿದರು.




ಆಳಂದ ಪಟ್ಟಣದ ಏಕಾಂತ ರಾಮಯ್ಯ ದೇವಸ್ಥಾನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತಾಲೂಕಾ ಘಟಕದ ವತಿಯಿಂದ ಜರುಗುತ್ತಿರುವ 14ನೇ ವರ್ಷದ ಶ್ರಾವಣ ಸಂಜೆ ಉಪನ್ಯಾಸ ಕಾರ್ಯಕ್ರಮದಲ್ಲಿ 'ಜನಪದ ಸಾಹಿತ್ಯದಲ್ಲಿ ಶರಣರು' ಎಂಬ ವಿಷಯದ ಕುರಿತು ಅವರು ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಚಿಂತಕ ಮಲ್ಲಿಕಾರ್ಜುನ ಬೋಳಣಿ ಮಾತನಾಡಿ, ನಮ್ಮ ದೇಶದಲ್ಲಿ ದೇವಾಲಯಗಳ ಘಂಟೆಗಳಿಗಿಂತ ಶಾಲೆಗಳ ಘಂಟೆಗಳು ಹೆಚ್ಚಾಗಬೇಕಿದೆ. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ ಎಂದು ಮಾರ್ಮಿಕವಾಗಿ ಹೇಳಿದರು.

ಉಪನ್ಯಾಸಕ ಶಿವಲಿಂಗಪ್ಪ ಮಂಟಗಿ ಮಾತನಾಡಿ, ನಮ್ಮ ದೇಶದಲ್ಲಿ ಬಡ ವರ್ಗದವರಿಗೆ ಧೈರ್ಯವಿಲ್ಲ. ಮಧ್ಯಮ ವರ್ಗದವರಿಗೆ ಸಮಯವಿಲ್ಲ. ಶ್ರೀಮಂತರಿಗೆ ಧೈರ್ಯ, ಸಮಯವಿದ್ದರು ಕೂಡಾ ದೇಶದ ಬದಲಾವಣೆಯ ಮನಸ್ಸಿಲ್ಲ. ಈ ಮೂರು ವರ್ಗಗಳಲ್ಲಿನ ಮನೋಭಾವನೆ ಬದಲಾದರೆ ಮಾತ್ರ ದೇಶದ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಕಜಾಪ ಖಜೂರಿ ವಲಯ ಅಧ್ಯಕ್ಷ ರಾಜಶೇಖರ ಹರಿಹರ, ಜೇವರ್ಗಿ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಲಿಂಗರಾಜ ಹಿರೇಗೌಡ್, ಮುಖಂಡ ಸಂಜೀವಕುಮಾರ ದೇಶಮುಖ, ಜಾನಪದ ಕಲಾವಿದೆ ಚಂದ್ರಕಲಾ ಬಂಡೆ, ಕಜಾಪ ತಾಲೂಕಾಧ್ಯಕ್ಷ ಅಪ್ಪಾಸಾಬ್ ತೀರ್ಥೆ, ಅಭಾಶಸಾಪ ತಾಲೂಕಾಧ್ಯಕ್ಷ ಸಂಜಯ ಪಾಟೀಲ್

## ಸಪ್ತ ಕೋಟಿ ಮಂತ್ರಗಳ ತಾಯಿ 'ಓಂ ನಮಃ ಶಿವಾಯ' ಮಂತ್ರ ಪಠಣದಿಂದ ಭವ ಪಾಪ ನಾಶ: ಡಾ. ರಾಜಶೇಖರ ಶಿವಾಚಾರ್ಯ101 ದಂಪತಿಗಳಿಂದ ಸಾಮೂಹಿಕ ಲಕ್ಷ ಬಿಲ್ವಾರ್ಚನೆ

ಔರಾದ್ : ಸಪ್ತ ಕೋಟಿ ಮಂತ್ರಗಳ ತಾಯಿಯಾದ 'ಓಂ ನಮಃ ಶಿವಾಯ' ಮಂತ್ರವನ್ನು ಶ್ರದ್ಧಾ-ಭಕ್ತಿಯಿಂದ ಪಠಿಸುವುದರಿಂದ ಮನಸ್ಸು ಶುದ್ಧಿಯಾಗುವುದರ ಜೊತೆಗೆ ಭವ ಪಾಪಗಳು ನಾಶವಾಗಿ ಆತ್ಮಶಾಂತಿ ದೊರೆಯುತ್ತದೆ ಎಂದು ಬೇಮಳಖೇಡ ಮಠದ ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿ ಗೋರ್ಟಾ ಹೇಳಿದರು.



ಪಟ್ಟಣದ ಐತಿಹಾಸಿಕ ಅಮರೇಶ್ವರ ದೇಗುಲದಲ್ಲಿ ಶ್ರಾವಣ ಮಾಸದ ನಿಮಿತ್ತ ಡಾ.ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಹಾಗೂ ಭಕ್ತರ ವತಿಯಿಂದ ನಡೆದ ಸಾಮೂಹಿಕ ಲಕ್ಷ ಬಿಲ್ವಾರ್ಚನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿವನಿಗೆ ಅತ್ಯಂತ ಪ್ರಿಯವಾದ ಬಿಲ್ವಪತ್ರೆಯನ್ನು ಅರ್ಪಿಸುವುದು ಪುಣ್ಯಕರವಾದ ಸೇವೆಯಾಗಿದೆ. ಬಿಲ್ವಾರ್ಚನೆಯೊಂದಿಗೆ 'ಓಂ ನಮಃ ಶಿವಾಯ' ಮಂತ್ರವನ್ನು ಭಕ್ತಿಯಿಂದ ಪಠಿಸುವುದರಿಂದ ಮನಸ್ಸಿನಲ್ಲಿರುವ ನಕಾರಾತ್ಮಕ ಚಿಂತನೆಗಳು ದೂರವಾಗಿ ಭಕ್ತಿ, ಶಾಂತಿ ಹಾಗೂ ಸಾತ್ವಿಕತೆ ವೃದ್ಧಿಯಾಗುತ್ತದೆ ಎಂದರು.

'ಓಂ ನಮಃ ಶಿವಾಯ' ಎಂಬ ಪಂಚಾಕ್ಷರಿ ಮಂತ್ರವು ಶಿವಭಕ್ತಿಯ ಸಾರವಾಗಿದ್ದು, ನಿರಂತರ ಮಂತ್ರ ಪಠಣದಿಂದ ಮನಸ್ಸಿಗೆ ಏಕಾಗ್ರತೆ ದೊರೆಯುತ್ತದೆ. ಪ್ರತಿಯೊಬ್ಬರೂ ನಿತ್ಯ ಜೀವನದಲ್ಲಿ ಕೆಲ ಸಮಯವನ್ನು ಶಿವನಾಮಸ್ಮರಣೆಗೆ ಮೀಸಲಿಡಬೇಕು ಎಂದು ಅವರು ಕರೆ ನೀಡಿದರು. ಈ ಸಂದರ್ಭದಲ್ಲಿ ಪ್ರವಚನಕಾರರಾದ ಗುರುಪಾದಯ್ಯ ಶಾಸ್ತ್ರಿಗಳು, ಅರ್ಚಕ ರವಿ ಸ್ವಾಮಿ, ಸೇವಾ ಸಮಿತಿ ಅಧ್ಯಕ್ಷ ಬಸವರಾಜ ದೇಶಮುಖ, ಶರಣಪ್ಪ ಪಂಚಾಕ್ಷರಿ, ಡಾ.ಧನರಾಜ ರಾಗಾ, ಸೂರ್ಯಕಾಂತ ಬುಟ್ಟೆ, ಸುಭಾಷ ನಿರ್ಮಳೆ, ಶ್ರೀಕಾಂತ ಅಲ್ಮಾಜೆ, ಶರಣಪ್ಪ ಪಾಟೀಲ, ಅಮರಸ್ವಾಮಿ ಸ್ಥಾವರಮಠ, ಬಸವರಾಜ ಚ್ಯಾರೆ, ಸೂರ್ಯಕಾಂತ ವಲ್ಲೆಪೂರೆ, ಸರುಬಾಯಿ ರಾಗಾ, ಜ್ಯೋತಿ ಅಲ್ಮಾಜೆ, ಸುರೇಖಾ ಪಂಚಾಕ್ಷರಿ, ಪ್ರಭಾವತಿ ಮುದ್ದಾ ಸೇರಿದಂತೆ ಇನ್ನಿತರರಿದ್ದರು. ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಶಿವಲಿಂಗಕ್ಕೆ ಬಿಲ್ವಪತ್ರೆ ಅರ್ಪಿಸಿ ವಿಶೇಷ ಪೂಜೆ ಸಲ್ಲಿಸಿದರು. ದೇಗುಲದಲ್ಲಿ ಶಿವನಾಮಸ್ಮರಣೆ ಮೊಳಗಿದ್ದು, ಭಕ್ತಿಯ ವಾತಾವರಣ ನಿರ್ಮಾಣವಾಗಿತ್ತು. ಬಿಲ್ವಪತ್ರೆಯಿಂದ ತುಂಬಿದ ಅಮರೇಶ್ವರ ಉದ್ಭವಲಿಂಗ ಶ್ರಾವಣ ಮಾಸದ ನಿಮಿತ್ತ ಡಾ.ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ಗೋರ್ಟಾ ಅವರ ನೇತೃತ್ವದಲ್ಲಿ 101 ದಂಪತಿಗಳ ಸಾಮೂಹಿಕ ಲಕ್ಷ ಬಿಲ್ವಾರ್ಚನೆಯಿಂದ ಅಮರೇಶ್ವರ ಉದ್ಭವಲಿಂಗವು ಸಂಪೂರ್ಣವಾಗಿ ಬಿಲ್ವಪತ್ರೆಯಲ್ಲಿ ಅಲಂಕಾರಗೊಂಡು ಆಕರ್ಷಣಿಯವಾಗಿ ಕಂಡು ಭಕ್ತರು ದರ್ಶನ ಪಡೆದರು.

ಬೀದರ್ ವಿಶ್ವ ವಿದ್ಯಾಲಯಕ್ಕೆ ಮಹಾತ್ಮ ಬಸವೇಶ್ವರ ಹೆಸರಿಡಿ. ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಸ್ಥಾಪನೆ ಆದ ಬೀದರ್ ವಿಶ್ವ ವಿದ್ಯಾಲಯಕ್ಕೆ ಜಗಜ್ಯೋತಿ ಮಹಾತ್ಮ ಬಸವೇಶ್ವರರ ಹೆಸರು ಇಡುವ ಮೂಲಕ ಬೀದರ್ ಜನತೆಯ ಬಹುದಿನಗಳ ಕನಸು ಈಡೇರಿಸಬೇಕು, ಹಾಗೂ ಅಕ್ಕ ಮಹಾದೇವಿ ಜಯಂತಿಯನ್ನು ಸರ್ಕಾರದಿಂದ ಆಚರಿಸುವಂತೆ ಆದೇಶ ಹೊರಡಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

## ಬಿಜೆಪಿ ಏಜೆಂಟರಗಳಂತೆ ವರ್ತಿಸದೆ, ದಲಿತರ ಹಿತದಲ್ಲಿ ಹೋರಾಟ ಮಾಡಿ: ವಿಲಾಸ ಮೋರೆ

ಬೀದರ್: ಇಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ಯಖಾತೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ್ ಖಂಡ್ರೆ ಅವರ ವಿರುದ್ಧ ಕೆಲವರು ನಡೆಸುತ್ತಿರುವ ಪ್ರತಿಭಟನೆಗಳಿಗೆ ದಲಿತ ಸಮುದಾಯದ ಬೆಂಬಲವಿಲ್ಲ. ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ರಾಜಕೀಯ ದುರುದ್ದೇಶದಿಂದ ಪ್ರತಿಭಟನೆಗಳನ್ನು ನಡೆಸಲಾಗುತ್ತಿದೆ ಎಂದು ಭಾಲ್ಕಿಯ ದಲಿತ ಮುಖಂಡ ವಿಲಾಸ ಮೋರೆ ತಿಳಿಸಿದರು.



ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಚಿವರ ಅವಧಿಯಲ್ಲಿ ಎಸಿ-ಎಸ್‌ಟಿ ಸಮುದಾಯಕ್ಕೆ ಸಾವಿರಾರು ಮನೆಗಳ ಮಂಜೂರಾತಿ, 44 ಸಾವಿರ ಫಲಾನುಭವಿಗಳಿಗೆ ಸಾಲ ಸೌಲಭ್ಯ, ಗಂಗಾ ಕಲ್ಯಾಣ ಯೋಜನೆಯಡಿ 1,000 ಕೊಳವೆ ಬಾವಿಗಳ ವಿತರಣೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳು ನಡೆದಿವೆ. ದಲಿತರ ಕೇರಿಗಳಲ್ಲಿ ಎಸಸಿಪಿ-ಟಿಎಸ್‌ಪಿ ಅನುದಾನದಡಿ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ರಸ್ತೆ ಸೇರಿದಂತೆ ಮೂಲ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ಈಶ್ವರ್ ಖಂಡ್ರೆ ಹಾಗೂ ಅವರ ಪುತ್ರ ಸಾಗರ್ ಖಂಡ್ರೆ ಅವರು ಮನೆ ಮನೆಗೆ ತೆರಳಿ ಜನರ ನೆರವಿಗೆ ಧಾವಿಸಿದ್ದರು. ನಾಗ್ಪುರದ ದೀಕ್ಷಾ ಭೂಮಿಗೆ ತೆರಳುವವರಿಗೆ ಬೀದರ್‌ನಿಂದ ಉಚಿತ ವಾಹನ ವ್ಯವಸ್ಥೆ ಕಲ್ಪಿಸಿದ್ದರು ಎಂದು ತಿಳಿಸಿದರು. ತಾಲೂಕಿನಲ್ಲಿ ದಲಿತರ ಮೇಲೆ ಅನ್ಯಾಯ ಅಥವಾ ದೌರ್ಜನ್ಯ ನಡೆದ ಸಂದರ್ಭದಲ್ಲೂ ಸಚಿವರು ಹಾಗೂ ಸ್ಥಳೀಯ ಮುಖಂಡರು ತಕ್ಷಣ ಸ್ಪಂದಿಸಿ ಸಂತ್ರಸ್ತರಿಗೆ ನ್ಯಾಯ ದೊರಕಿಸಲು ಪ್ರಯತ್ನಿಸಿದ್ದಾರೆ ಎಂದು ಹೇಳಿದರು.

ಜೇರ್ಗಾ ಗ್ರಾಮದ ಕೊಲೆ ಪ್ರಕರಣದಲ್ಲೂ ಸಚಿವರು ವೈಯಕ್ತಿಕವಾಗಿ ?1 ಲಕ್ಷ ನೆರವು ನೀಡುವುದರೊಂದಿಗೆ ಸಂತ್ರಸ್ತ ಕುಟುಂಬಕ್ಕೆ ನಿವೇಶನ, ಉದ್ಯೋಗ ಹಾಗೂ ರಕ್ಷಣೆಯ ಭರವಸೆ ನೀಡಿದ್ದರು ಎಂದು ವಿಲಾಸ್ ಮೋರೆ ತಿಳಿಸಿದರು.

ದಲಿತ ಮುಖಂಡ ಮಾರೂತಿ ಭಂಗಾರೆ ಮಾತನಾಡಿ, ಈಶ್ವರ್ ಖಂಡ್ರೆ ಅವರ ಹೆಸರಿಗೆ ಕಳಂಕ ತರಲು ಕೆಲವರು ವ್ಯವಸ್ಥಿತ ಷಡ್ಯಂತ್ರ ನಡೆಸುತ್ತಿದ್ದಾರೆ. ದ್ವೇಷದ ರಾಜಕಾರಣಕ್ಕಾಗಿ ಅಪಪ್ರಚಾರ ನಡೆಸಲಾಗುತ್ತಿದ್ದು, ಹೋರಾಟದ ಹೆಸರಿನಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ರಾಜಕೀಯ ಪ್ರೇರಿತವಾಗಿವೆ ಎಂದು ಅವರು ಆರೋಪಿಸಿದರು.

ವಿನೋದ ಅಪ್ಪೆ ಮಾತನಾಡಿ, ಭಾಲ್ಕಿ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆ ಅಂಬೇಡ್ಕರ್ ಭವನಗಳ ನಿರ್ಮಾಣಕ್ಕೆ ಅನುದಾನ ನೀಡಿದ್ದಾರೆ. ಭಾಲ್ಕಿಗೆ ?4 ಕೋಟಿ ಅನುದಾನ ಒದಗಿಸಲಾಗಿದೆ. ಬೀದರ್‌ನ ಅತಿವಾಳ ಕ್ರಾಸ್ ಬಳಿ ಅಂಬೇಡ್ಕರ್ ಸಂಶೋಧನಾ ಕೇಂದ್ರ ನಿರ್ಮಾಣಕ್ಕಾಗಿ 10 ಎಕರೆ ಜಮೀನು ಮಂಜೂರು ಮಾಡಿಸಿದಲ್ಲದೆ, ಕಟ್ಟಡ ನಿರ್ಮಾಣಕ್ಕೆ ?50 ಕೋಟಿ ವೆಚ್ಚದ ಯೋಜನೆ ರೂಪಿಸಲಾಗಿದ್ದು, ಕೆಕೆಆರ್‌ಡಿಬಿಯಿಂದ ಖಂಡ್ರೆ ಈಗಾಗಲೇ ?20 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ ಎಂದು ತಿಳಿಸಿದರು.

ಸಂಜುಕುಮಾರ ಬಾವಿಕಟ್ಟಿ ಮಾತನಾಡಿ, ಸಮುದಾಯದ ಮುಖಂಡರಾದ ವಿಲಾಸ ಮೋರೆ, ರಾಜು ಭೋಸ್ಲೆ, ಸಂಜುಕುಮಾರ್ ಬಾವಿಕಟ್ಟೆ ಸೇರಿದಂತೆ ಹಲವರಿಗೆ ಕೆ-ಎಸ್‌ಐಐಡಿಸಿ, ಪುರಸಭೆ ಹಾಗೂ ವಿವಿಧ ನಿಗಮ-ಮಂಡಳಿಗಳಲ್ಲಿ ಈಶ್ವರ ಖಂಡ್ರೆ ನಾಮ ನಿರ್ದೇಶನ ನೀಡಿ ಅವಕಾಶ ಕಲ್ಪಿಸಿದ್ದಾರೆ ಎಂದು ಹೇಳಿದರು.

ದಲಿತ ಮುಖಂಡರುಗಳಾದ ರಾಜಕುಮಾರ ಬೌದ್ದೆ, ಪರಶಾಂತ ಕೋಟಗೆರಾ, ಚಂದ್ರಕಾಂತ ನಿರಾಟೆ, ಹಾಗೂ ಪ್ರದೀಪ ಮೋರೆ ಮಾತನಾಡಿ, ಈಶ್ವರ ಖಂಡ್ರೆಯವರು ಸರ್ವರಿಗೂ ಸಮಪಾಲು, ಸಮಬಾಳು ತತ್ವದಲ್ಲಿ ನಂಬಿಕೆ ಇಟ್ಟವರು. ಶೇಕಡಾ 90 ಪ್ರತಿಶತಕ್ಕು ಹೆಚ್ಚು ದಲಿತರು ಕಾಂಗ್ರೆಸ್ ಪಕ್ಷದಲ್ಲಿದ್ದಾರೆ. ರಾಜಕುಮಾರ ಮೂಲಭಾರತಿ, ರಾಹುಲ ಖಂದರೆ ಹಾಗೂ ಅವರ ತಂಡ ಬಿಜೆಪಿ ಏಜೆಂಟ್‌ಗಳಂತೆ ವರ್ತಿಸದೆ ಭಾಲ್ಕಿ ತಾಲೂಕು ಹಾಗೂ ಈಶ್ವರ ಖಂಡ್ರೆ, ಸಂಸದ ಸಾಗರ ಖಂಡ್ರೆ ಅವರ ಬಗ್ಗೆ ಮಾತನಾಡುವ ಮೊದಲು ಸತ್ಯ ಅರಿತು ಎಲ್ಲ ತಾಲೂಕುಗಳಲ್ಲಾಗುತ್ತಿರುವ ದಲಿತರ ಅನ್ಯಾಯದ ಮೇಲೆ ಬೆಳಕು ಚೆಲ್ಲುವ ಕಾರ್ಯ ಮಾಡಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡರಾದ ನಾರಾಯಣ ಮೋರೆ, ಸುಶಿಲ ಬರೂರೆ, ರಾಹುಲ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.



## ಬರ ಘೋಷಣೆಗೆ ಆಗ್ರಹಿಸಿ ಮನವಿ ಸಲ್ಲಿಕೆ

ಕಾಳಗಿ : ಕಾಳಗಿ ಹಾಗೂ ಚಿಂಚೋಳಿ ತಾಲೂಕು ಬರಘೋಷಿತ ತಾಲೂಕು ಎಂದು ಘೋಷಣೆ ಮಾಡುವಂತೆ ಸೋಮವಾರ ಮಾದಿಗ ದಂಡೋರ ಹೋರಾಟ ಸಮಿತಿ ವತಿಯಿಂದ ತಹಸೀಲ್ದಾರ್ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ವೇಳೆ ಮಾದಿಗ ದಂಡೋರ ಹೋರಾಟ ಸಮಿತಿ ಜಿಲ್ಲಾ ಅಧ್ಯಕ್ಷ ಸುಂದರ ಸಾಗರ ಸರ್ಕಾರ ಈಗಾಗಲೇ ಬರಗಾಲ ಘೋಷಿತ ಮಾಡಿರೋ ಪಟ್ಟಿಯಲ್ಲಿ ಕಲಬುರಗಿ ಜಿಲ್ಲೆಯ ಕಾಳಗಿ ಹಾಗೂ ಚಿಂಚೋಳಿ ತಾಲೂಕು ಕೈ ಬಿಟ್ಟಿರುವುದರಿಂದ ಈ ಭಾಗದ ರೈತರಿಗೆ ಅನ್ಯಾಯ ಮಾಡಿದಂತಾಗಿದೆ. ಈ ವರ್ಷ ಮಳೆಯ ಕೊರತೆಯಾಗಿ ಮುಂಗಾರು ಬೆಳೆ ಸಂಪೂರ್ಣ ನಾಶವಾಗಿದ್ದು ರೈತರು ಸಂಕಷ್ಟದಲ್ಲಿದ್ದಾರೆ. ಇದರ ಸರಿಯಾದ ವರದಿ ಕೂಡ ಸಂಬಂಧಿಸಿದ ಅಧಿಕಾರಗಳು ಸರ್ಕಾರಕ್ಕೆ ನೀಡುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ಈ ಭಾಗ ಅತಿ ಹಿಂದುಳಿದ ಭಾಗ ಆಗಿದ್ದರಿಂದ ಬೆಳೆ ಸಮೀಕ್ಷೆ ಸರಿಯಾದ ವರದಿ ಮಾಡಿಸಿ ಅದರ ವರದಿ ಪಡೆದುಕೊಂಡು ಕಾಳಗಿ ತಾಲೂಕು ಹಾಗೂ ಚಿಂಚೋಳಿ ತಾಲೂಕು ಆದೆಷ್ಟು ಬೇಗ ಬರಗಾಲ ಘೋಷಣೆ ಮಾಡಿ ರೈತರಿಗೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದರು.

ಮಲ್ಲಿಕಾರ್ಜುನ ಸಿಂಗೆ, ತಿಮ್ಮಯ್ಯ ಒಡೆಯರಾಜ, ಸಾಯಬಣ್ಣ ಪೂಜಾರಿ,ಇಂದ್ರಜಿತ್ ಕಟ್ಟಿಮನಿ ಸೇರಿದಂತೆ ಅನೇಕರಿದ್ದರು.

## ಕೇಂದ್ರ ಕಾರಾಗೃಹದ ಅಧೀಕ್ಷಕಿ ಡಾ.ಅನಿತಾ ಅಮಾನತು



ಕಲಬುರಗಿ: ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ಐಷಾರಾಮಿ ಸೌಲಭ್ಯ ದೊರೆತ ಪ್ರಕರಣದ ವಿಡಿಯೋಗಳು ಸಾಮಾಜಿಕ ಹಾಗೂ ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾದ ಪ್ರಕರಣ-ಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಕಂಡುಬಂದ ಹಿನ್ನೆಲೆಯಲ್ಲಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಡಾ.ಅನಿತಾ ಆರ್. ಅವರನ್ನು ಅಮಾನತುಗೊಳಿಸಲಾಗಿದೆ.

ಈ ಕುರಿತು ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಪೊಲೀಸ್ ಮಹಾನಿರ್ದೇಶಕ ಆಲೋಕ್ ಕುಮಾರ್ ಆದೇಶ ಹೊರಡಿಸಿದ್ದಾರೆ.

ಸರ್ಕಾರಿ ಆದೇಶದಂತೆ ಡಾ.ಅನಿತಾ ಆರ್. ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತು ಮಾಡಲಾಗಿದೆ. ಅಲ್ಲದೆ, ಅವರು ಹೊಂದಿದ್ದ ಹುದ್ದೆಯ ಹಕ್ಕನ್ನು ನೂತನ ಕೇಂದ್ರ ಕಾರಾಗೃಹ, ವಿಜಯಪುರಕ್ಕೆ ಸ್ಥಳಾಂತರಿಸಿ ಆದೇಶಿಸಲಾಗಿದೆ.

ಕಲಬುರಗಿ ಕೇಂದ್ರ ಕಾರಾಗೃಹದೊಳಗಿನ ಕೈದಿಗಳ ಚಟುವಟಿಕೆಗಳಿಗೆ ಸಂಬಂಧಿಸಿದ ವಿಡಿಯೋಗಳು ಸಾಮಾಜಿಕ ಜಾಲತಾಣಗಳು ಹಾಗೂ ವಿವಿಧ ದೃಶ್ಯ ಮಾಧ್ಯಮಗಳಲ್ಲಿ ವೈರಲ್ ಆಗಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದ್ದವು. ಈ ಹಿನ್ನೆಲೆಯಲ್ಲಿ ಕಾರಾಗೃಹದ ಆಡಳಿತಾತ್ಮಕ ಜವಾಬ್ದಾರಿ ನಿರ್ವಹಣೆಯಲ್ಲಿ ಮೇಲ್ನೋಟಕ್ಕೆ ಕರ್ತವ್ಯಲೋಪ ಕಂಡುಬಂದಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಹಿಂದೆ ವೀಡಿಯೋ ವೈರಲ್ ಪ್ರಕರಣ-ಕ್ಕೆ ಸಂಬಂಧಿಸಿದಂತೆ ಅನಿತಾ ಅವರನ್ನು ಕೂಡಲೇ ಜಾರಿಗೆ ಬರುವಂತೆ ವರ್ಗಾವಣೆ ಮಾಡಲಾಗಿತ್ತು.

## ನಕಲಿ ಚಿನ್ನಾಭರಣ ಅಡವಿಟ್ಟು ಲೋನ್ ಪಡೆದು ಮರುಪಾವತಿಸದೆ ಬ್ಯಾಂಕಿಗೆ 36.27 ಲಕ್ಷ ವಂಚನೆ

ಕಲಬುರಗಿ: ನಕಲಿ ಚಿನ್ನಾಭರಣ ಅಡವಿಟ್ಟು ಲೋನ್ ಪಡೆದು ಮರುಪಾವತಿಸದೆ ಕೆಬಿಎಸ್ ಬ್ಯಾಂಕಿಗೆ 36,27,332 ರೂಪಾಯಿಗಳ ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಈ ಸಂಬಂಧ ನಗರದ ಸೂಪರ್ ಮಾರ್ಕೆಟನಲ್ಲಿರುವ ಕೃಷ್ಣ ಭೀಮ ಸಮೃದ್ಧಿ ಲೋಕಲ್ ಏರಿಯಾ ಬ್ಯಾಂಕ್ (ಕೆಬಿಎಸ್)ನ ಶಾಖಾ ವ್ಯವಸ್ಥಾಪಕ ಹರ್ಷ ಕುಲಕರ್ಣಿ ಅವರು ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಆದಮ್ ಖಾನ್ ತಂದೆ ಲಿಯಾಖತ್ ಅಲಿ, ಬಂಡಿಗೆಪ್ಪ ತಂದೆ ಸಾಬಣ್ಣ, ಧೀರಾಜ್ ತಂದೆ ವಿಠ್ಠಲ, ಜಗನ್ನಾಥ ತಂದೆ ಇಸ್ಮಾಯಿಲಪ್ಪ, ಕೃಷ್ಣ ತಂದೆ ಶರಣಪ್ಪ ಹಾಗೂ ಮಹೇಶ್ ತಂದೆ ಭೀಮಶಾ ವಾಡೇಕರ್ ಎಂಬುವವರು ಅಕ್ಟೋಬರ್ 2022 ರಿಂದ 2023ರವರೆಗಿನ ವಿವಿಧ ದಿನಾಂಕಗಳಲ್ಲಿ ಬ್ಯಾಂಕಿನಲ್ಲಿ ನಕಲಿ ಚಿನ್ನಾಭರಣ ಅಡವಿಟ್ಟು ಲೋನ್ ಪಡೆದು ಸರಿಯಾದ ಸಮಯದಲ್ಲಿ ಮರು ಪಾವತಿಸದೆ ಬ್ಯಾಂಕಿಗೆ 36,27,332 ರೂ.ವಂಚನೆ ಮಾಡಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಇವರು ಸಾಲ ಪಡೆಯುವ ಕಾಲಕ್ಕೆ ಬ್ಯಾಂಕಿನ ಅಪ್ರೈಸರ್ ಅಶ್ವಿನ್ ಕುಮಾರ ಅವರು ಬಂಗಾರದ ಆಭರಣ ನಕಲಿ ಇರುವುದು ಗೊತ್ತಿದ್ದರೂ ಸಹ ಅಸಲಿ ಬಂಗಾರದ ಆಭರಣವಿರುವುದಾಗಿ ಪ್ರಮಾಣ ಪತ್ರ ನೀಡಿರುವುದರಿಂದ ಲೋನ್ ಮಂಜೂರಾಗಿದೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಆದಮ್ ಖಾನ್, ಬಂಡಿಗೆಪ್ಪ, ಧೀರಾಜ್, ಜಗನ್ನಾಥ, ಕೃಷ್ಣ ಮತ್ತು ಮಹೇಶ್ ವಾಡೇಕರ್ ಅವರು ಪಡೆದ ಸಾಲದ ಮೊತ್ತ ಬ್ಯಾಂಕಿನ್ ಬಡ್ಡಿ ಸೇರಿ 36.37 ಲಕ್ಷ ರೂ.ಬ್ಯಾಂಕಿಗೆ ಮರು ಪಾವತಿಸದೆ ಬ್ಯಾಂಕಿಗೆ ವಂಚನೆ ಮಾಡಿದ್ದು, ಅವರು ವಿರುದ್ಧ ಕಾನೂನು ರಿತ್ಯ ಕ್ರಮ ಜರುಗಿಸಬೇಕು ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಬೆಳಕಿಗೆ ಬಂದಿದ್ದು ಹೇಗೆ ? ಹರ್ಷ ಕುಲಕರ್ಣಿ ಅವರು ಈ ಮೊದಲು ಆಳಂದದ ಕೆಬಿಎಸ್ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದರು. 14.5.2026 ರಂದು ಆಳಂದದಿಂದ ಕಲಬುರಗಿಯ ಸೂಪರ್ ಮಾರ್ಕೆಟನಲ್ಲಿರವ ಕೆಬಿಎಸ್ ಬ್ಯಾಂಕಿಗೆ ವರ್ಗಾವಣೆಯಾಗಿ ಬಂದ ಮೇಲೆ ಬ್ಯಾಂಕಿನ ಎಲ್ಲಾ ದಾಖಲಾತಿಗಳು, ಲೋನ್ ಮತ್ತು ಗೋಲ್ಡ್ ಲೋನ್ ಕಡತಗಳನ್ನು ಪರಿಶೀಲನೆ ನಡೆಸಿದಾಗ ಈ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ.



ಕಲಬುರಗಿ: ಜಿಲ್ಲಾಡಳಿತ, ಜಿ.ಪಂ.,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಗರದ ಚಂದ್ರಶೇಖರ್ ಪಾಟೀಲ ಕ್ರೀಡಾಂಗಣದಲ್ಲಿಂದು ಹಮ್ಮಿಕೊಂಡಿದ್ದ ಕಲಬುರಗಿ ತಾಲೂಕಾ ಮಟ್ಟದ ದಸರಾ ಕ್ರೀಡಾಕೂಟವನ್ನು ಶಾಸಕ ಅಲ್ಲಮಪ್ರಭು ಪಾಟೀಲ ಉದ್ಘಾಟಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಅಮೃತ ಎನ್.ಅಷ್ಟಗಿ ಸೇರಿದಂತೆ ಮತ್ತಿತರರು ಇದ್ದರು.




ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ ದಶಕಗಳಿಂದ ಖಾಲಿ ಇರುವ 30 ಸಾವಿರ ಶಿಕ್ಷಕರ ಹುದ್ದೆಗಳನ್ನು ಮತ್ತು ಇತರೆ ಇಲಾಖೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಳ ಈಡೇರಿಕೆಗೆ ಆಗ್ರಹಿಸಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಲಾಯಿತು. ಕೆ.ನೀಲಾ, ಅರ್ಜುನ ಭದ್ರೆ, ನಾಗೇಂದ್ರ ಥಂಬೆ, ರಮೇಶ ರಾಗಿ, ಮರೆಪ್ಪ ಹಳ್ಳಿ, ಶಶಿಕಲಾ ಪಾಟೀಲ, ಮಂಜುಳಾ ಭಜಂತ್ರಿ, ಪಾಂಡುರಂಗ ಮಾವಿನಕರ್, ಮಲ್ಲಿಕಾರ್ಜುನ ಕ್ರಾಂತಿ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನೆರವಾದ ಭವಿಷ್ಯ ಬೆಳಕು ಚಾರಿಟಬಲ್ ಟ್ರಸ್ಟ್

ಸೇಡಂ: ಶಿಕ್ಷಕರ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಭವಿಷ್ಯ ಬೆಳಕು ಚಾರಿಟಬಲ್ ಟ್ರಸ್ಟ್ ವತಿಯಿಂದ ಕೊರಡಂಪಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ನೋಟಬುಕ್ ಹಾಗೂ ಪೆನಗಳನ್ನು ವಿತರಿಸುವ ಮೂಲಕ ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ದೀನದಲಿತರ ಹಾಗೂ ಬಡವರ ಬಂಧು, ಅನ್ನದಾನ, ವಿದ್ಯಾದಾನ ಮತ್ತು ಕೃಷಿ ಅಭಿವೃದ್ಧಿಯ ಹರಿಕಾರರಾದ ಕರ್ನಾಟಕ ರಾಜ್ಯ ಭವಿಷ್ಯ ಬೆಳಕು ಚಾರಿಟಬಲ್ ಟ್ರಸ್ಟ್‌ನ ರಾಜ್ಯಾಧ್ಯಕ್ಷ ಗಿರೀಶ ನೇಲ್ಕುದ್ರಿ ಅವರ ಸಹಾಯಕರಾದ ಪೃಥ್ವಿರಾಜ ಸಲಗರ್ ಅವರ ಮುಖಾಂತರ ವಿದ್ಯಾರ್ಥಿಗಳಿಗೆ ನೋಟಬುಕ್ ಹಾಗೂ ಪೆನ್‌ಗಳನ್ನು ವಿತರಿಸಲಾಯಿತು.



ಈ ಸಂದರ್ಭದಲ್ಲಿ ಟ್ರಸ್ಟನ ಸದಸ್ಯರಾದ ಚಂದ್ರಕಾಂತ ಕಪನೂರ, ಸುಮೀತ ಸಲಗರ್, ಕವಿತಾ ಚಂದ್ರಕಾಂತ ಕಪನೂರ, ಶಾಲೆಯ ಮುಖ್ಯಗುರು ಶ್ರೀಶೈಲ ನಾಗಾವಿ, ಎಸ್‌ಡಿಎಂಸಿ ಅಧ್ಯಕ್ಷ ಶ್ರೀಮಂತ ಮೇತ್ರಿ, ಸಾಮಾಜಿಕ ಕಾರ್ಯಕರ್ತ ವಿಜಯಕುಮಾರ ಕೊರಡಂಪಳ್ಳಿ, ಎಸ್‌ಡಿಎಂಸಿ ಸದಸ್ಯರಾದ ವಿನೋದ ವಿಮ್ಮಾ, ಶಿಕ್ಷಕರಾದ ಲಕ್ಷ್ಮೀಣಿಬಾಯಿ, ಸುನೀಲಕುಮಾರ, ಶಿವಕುಮಾರ, ರೇವಣಸಿದ್ದಪ್ಪ, ರಾಘವೇಂದ್ರ, ರಾಜು, ಭಾಗ್ಯಶ್ರೀ, ಡಿಜಿಟಲ್ ಸಖಿ ಗುಂಡಮ್ಮಾ ತಳವಾರ, ಹಣಮಂತರಾವ ತಿಪ್ಪಾ, ಮೋಹನ ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಭಾರತದ ಶ್ರೇಷ್ಠ ತತ್ವಜ್ಞಾನಿ, ಶಿಕ್ಷಣ ತಜ್ಞ ಹಾಗೂ ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವಾದ ಸೆ. 5ರಂದು ದೇಶಾದ್ಯಂತ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಕರ ಮಹತ್ವ ಹಾಗೂ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರವನ್ನು ಸ್ಮರಿಸಲಾಯಿತು.ಶಿಕ್ಷಕರು ಕೇವಲ ಪಾಠ ಹೇಳುವವರಲ್ಲ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಲ್ಪಿಗಳು. ಮಕ್ಕಳ ತಪ್ಪುಗಳನ್ನು ತಿದ್ದಿ, ಅವರ ಪ್ರತಿಭೆಯನ್ನು ಗುರುತಿಸಿ, ಜೀವನದಲ್ಲಿ ಯಶಸ್ಸಿನತ್ತ ಸಾಗಲು ಸೂಕ್ತ ಮಾರ್ಗದರ್ಶನ ನೀಡುತ್ತಾರೆ. ಮಾತಾ-ಪಿತರ ನಂತರ ಮಕ್ಕಳ ಜೀವನದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಗಣ್ಯರು ಹೇಳಿದರು.

ಮಣ್ಣಿಗೆ ಮಡಿಕೆ ಮಾಡುವವರು ಸುಂದರ ರೂಪ ನೀಡುವಂತೆ, ಶಿಕ್ಷಕರು ವಿದ್ಯಾರ್ಥಿಗಳ ವ್ಯಕ್ತಿತ್ವಕ್ಕೆ ಉತ್ತಮ ರೂಪ ನೀಡುತ್ತಾರೆ. ಜೀವನದಲ್ಲಿ ಎಷ್ಟೇ ಎತ್ತರಕ್ಕೆ ಬೆಳೆದರೂ ಅಕ್ಷರ ಕಲಿಸಿ, ಜ್ಞಾನದ ದೀಪ ಬೆಳಗಿಸಿ, ಸನ್ಮಾರ್ಗ ತೋ-ರಿದ ಗುರುಗಳನ್ನು ಎಂದಿಗೂ ಮರೆಯಬಾರದು ಎಂದು ತಿಳಿಸಿದರು.

ವಿದ್ಯಾರ್ಥಿಗಳನ್ನು ಸನ್ಮಾರ್ಗದಲ್ಲಿ ಮುನ್ನಡೆಸಿ, ಜ್ಞಾನದ ಬೆಳಕು ಹರಿಸುವ ಮೂಲಕ ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡುವ ಶಿಕ್ಷಕರು ದೇಶದ ನಿಜವಾದ ಶಿಲ್ಪಿಗಳು. ಅಜ್ಞಾನವನ್ನು ದೂರಮಾಡಿ, ಸುಸಂಸ್ಕೃತ ಸಮಾಜ ನಿರ್ಮಿಸುವ ಮಹತ್ತರ ಕಾರ್ಯದಲ್ಲಿ ಶಿಕ್ಷಕರ ಪಾತ್ರ ಅಮೂಲ್ಯವಾಗಿದೆ ಎಂದು ಗಣ್ಯರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಎಲ್ಲ ಶಿಕ್ಷಕರಿಗೆ ಹೃದಯಪೂರ್ವಕ ಕೃತಜ್ಞತೆ ಸಲ್ಲಿಸಿ, ಅವರ ಮಾರ್ಗದರ್ಶನ ಹಾಗೂ ಆಶೀರ್ವಾದ ಸದಾ ವಿದ್ಯಾರ್ಥಿಗಳ ಮೇಲಿರಲಿ ಎಂದು ಶುಭಹಾರೈಸಲಾಯಿತು.

## ಕನ್ನಡ ಉಳಿಸಲು ಮಠ-ಮಾನ್ಯಗಳ ಕೊಡುಗೆ ಅಪಾರ : ಡಾ.ಶರಣಬಸಪ್ಪ ವಡ್ಡನಕೇರಿ

ಕಲಬುರಗಿ :ಹೈದರಾಬಾದ ನಿಜಾಮರ ಆಡಳಿತದ ಸಂದರ್ಭದಲ್ಲಿ ಉರ್ದು, ಮರಾಠಿ ಹಾಗೂ ತೆಲುಗು ಭಾಷೆಗಳ ಪ್ರಭಾವದಿಂದ ಕಲ್ಯಾಣ ಕರ್ನಾಟಕದಲ್ಲಿ ಕನ್ನಡ ಭಾಷೆ ನಲುಗುವ ಪರಿಸ್ಥಿತಿಯಲ್ಲಿದ್ದಾಗ ಭಾಲ್ಕಿ ಮಠ ಹಾಗೂ ಶರಣಬಸವೇಶ್ವರ ಸಂಸ್ಥಾನ ಕನ್ನಡ ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ಸಾಹಿತಿ ಡಾ.ಶರಣಬಸಪ್ಪ ವಡ್ಡನಕೇರಿ ಹೇಳಿದರು.



ನಗರದ ಕಲಾಮಂಡಳದಲ್ಲಿ ಬೆಂಗಳೂರಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಪಾಳಾದ ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಸ್ವಾತಂತ್ರ್ಯ ಪೂರ್ವ ಹೈದರಾಬಾದ ಕರ್ನಾಟಕದಲ್ಲಿ ಕನ್ನಡ ಕಟ್ಟಿದವರು' ವಿಷಯದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡದ ಮೊದಲ ಕೃತಿಗಳಲ್ಲಿ 'ಕವಿರಾಜಮಾರ್ಗ' ಕೃತಿಯು ಕವಿ ಶ್ರೀವಿಜಯ ಕನ್ನಡ ಸಾಹಿತ್ಯಕ್ಕೆ ರಾಜಮಾರ್ಗವನ್ನು ತೆರೆದಿಟ್ಟಿತು. ಕನ್ನಡ ನಾಡಿನ ಸೀಮೆ, ಜನರ ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಿತು. ವಚನ ಸಾಹಿತ್ಯದ ಬೀಜ ಇಲ್ಲಿಯೇ ಮೊಳೆಕೆ ಒಡೆದು , ದಾಸ ಸಾಹಿತ್ಯದ ತೊಟ್ಟಿಲು ಕೂಡ ಈ ಭಾಗದಲ್ಲಿಯೇ ತೂಗಿ-ತು. ಇಂತಹ ಶ್ರೀಮಂತ ಕನ್ನಡ ನುಡಿ ಸೊರಗುವುದನ್ನು ಇಲ್ಲಿನ ಕನ್ನಡ ಪ್ರೇಮಿಗಳು, ಮಠ-ಮಾನ್ಯಗಳು ಸುಮ್ಮನೆ ನೋಡುತ್ತಿರಲಿಲ್ಲ . ಹೊರಗಡೆ ಉರ್ದು ಫಲಕಗಳನ್ನು ಹಾಕಿ ಒಳಗಡೆ ಕನ್ನಡವನ್ನು ಕಲಿಸುವ ಮೂಲಕ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಿದರು ಎಂದು ಡಾ. ಶರಣಬಸಪ್ಪ ವಡ್ಡನಕೇರಿ ಹೇಳಿದರು.

ಕರ್ನಾಟಕ ಏಕೀಕರಣದ ಹೋರಾಟಕ್ಕೆ ದೊಡ್ಡಪ್ಪ ಅಪ್ಪ ಅವರು ನೀಡಿದ ಕೊಡುಗೆ ಸ್ಮರಣೀಯವಾಗಿದೆ ಎಂದು ಡಾ. ಕೆ. ಗಿರಿಮಲ್ಲ ಹೇಳಿದರು.

ದೊಡ್ಡಪ್ಪ ಅಪ್ಪ ಅವರ ಅವಧಿಯಲ್ಲಿ ಕಲಬುರಗಿ ನಗರದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅವರ ಆಶ್ರಯ ಹಾಗೂ ಆಸರೆಯಲ್ಲಿ ಯಶಸ್ವಿಯಾಗಿ ನಡೆಯಿತು

ಕಲಬುರಗಿಯ ಶರಣಬಸವೇಶ್ವರ ಸಂಸ್ಥಾನವು ಕನ್ಯಾ ಶಾಲೆ ಆರಂಭಿಸುವ ಮೂಲಕ ಅಕ್ಷರ ಜ್ಯೋತಿ ಬೆಳಗಿಸಿತು. ಪಂಡಿತ ತಾರಾನಾಥರು ರಾಯಚೂರು ಭಾಗದಲ್ಲಿ ಕನ್ನಡದ ಕೆಲಸ ಮಾಡಿದರು. ಸ್ವಾಮಿ ರಮಾನಂದ ತೀರ್ಥರು, ಅನ್ನದಾನಯ್ಯ ಪುರಾಣಿಕ, ಕೊಪ್ಪಳ ಕೃಷ್ಣರಾವ್, ಸುರಪುರದ ಬುದ್ಧಿವಂತ ಶೆಟ್ಟರು, ಭಾಲ್ಕಿಯ ಮಠ, ಪರುಷ ಮಠ ಸೇ-ರಿದಂತೆ ಅನೇಕರು ಕನ್ನಡ ಉಳಿವಿಗಾಗಿ ಶ್ರಮಿಸಿದ್ದಾರೆ. ಇಂತಹ ಮಹನೀಯರ ಪರಿಶ್ರಮದ ಫಲವಾಗಿ ಕಲ್ಯಾಣ ಕರ್ನಾಟಕದಲ್ಲಿ ಕನ್ನಡ ಉಳಿದುಕೊಂಡಿದೆ. ಅದನ್ನು ಇನ್ನಷ್ಟು ಶ್ರೀಮಂತಗೊಳಿಸುವ ಹೊಣೆ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಸಿದ್ದಣಗೌಡ ಕೆ. ಪಾಟೀಲ ಕಡಣಿ ಉದ್ಘಾಟಿಸಿದರು. ಉಮೇಶ ಸಿದ್ದಣಗೋಳ ಕಡಣಿ, ಮಲ್ಲಿನಾಥ ಕೊಳ್ಳೂರ, ಅಂಬಾರಾಯ ಕೋಣೆ ಹಾಗೂ ರಮಾದೇವಿ ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿಶ್ವನಾಥ ಭಕರೆ ಹಾಗೂ ಸಿದ್ದರಾಮ ರಾಜಮಾನೆ ಪ್ರತಿಕ್ರಿಯೆ ನೀಡಿದರು.

ಪ್ರೊ. ಯಶವಂತರಾಯ ಅಷ್ಠಗಿ, ಶಿವಯೋಗಿ ಭಜಂತ್ರಿ, ನಾಗರಾಜ ಗಂದಿಗುಡಿ, ಚಾಮರಾಜ ದೊಡ್ಡಮನಿ, ಸೈಯದ್ ಅಕ್ಬರ್ ಹುಸೇನಿ, ಜಗನ್ನಾಥ ಪಾಟೀಲ ಧರ್ಮಾಪುರ ಸೇ-ರಿದಂತೆ ಹಲವರು ಗೌರವ ಉಪಸ್ಥಿತರಿದ್ದರು.

ಟ್ರಸ್ಟ್ ಅಧ್ಯಕ್ಷ ಶರಣಗೌಡ ಪಾಟೀಲ ಪಾಳಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗುಂಡೂರಾವ್

## ಶ್ರೇಷ್ಠ ವಿದ್ಯಾಲಯ, ಶಿಕ್ಷಕ ಹಾಗೂ ಬೋಧಕೇತರ ಸಿಬ್ಬಂದಿಗೆ ಪ್ರಶಸ್ತಿ ಪ್ರದಾನ

ಕಲಬುರಗಿ: ನೂತನ ವಿದ್ಯಾಲಯ ಸಂಸ್ಥೆ ವತಿಯಿಂದ ಶಿಕ್ಷಕರ ದಿನಾಚರಣೆ ಅಂಗವಾಗಿ ಶ್ರೇಷ್ಠ ವಿದ್ಯಾಲಯ, ಶ್ರೇಷ್ಠ ಶಿಕ್ಷಕ ಸೇರಿದಂತೆ ವಿವಿಧ ಪ್ರಶಸ್ತಿಗಳ ಪ್ರದಾನ ಹಾಗೂ ಸಂಸ್ಥೆಯ ಶಾಲಾ-ಕಾಲೇಜುಗಳ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮವನ್ನು ಶನಿವಾರ ನಗರದ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದ ಶ್ರೀ ಅನಂತರಾವ ದೇಶಮುಖ ಸಭಾಗೃಹದಲ್ಲಿ ಆಯೋಜಿಸಲಾಗಿತ್ತು.




ಈ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು. ಶ್ರೀಮತಿ ಗಂಗಾಬಾಯಿ ಹಾಗೂ ಶ್ರೀ ಅಡವಿರಾವ ಸಿದ್ಧಾಪೂರ ಅವರ ಸ್ಮರಣಾರ್ಥ ಶ್ರೇಷ್ಠ ವಿದ್ಯಾಲಯ ಪ್ರಶಸ್ತಿ ಹಾಗೂ ಶ್ರೀ ವೆಂಕಟರಾವ ಮಾನ್ವಿಕರ ಅವರ ಸ್ಮರಣಾಥ-'ರ್ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ ನೂತನ ವಿದ್ಯಾಲಯ ಸಂಸ್ಥೆ ವತಿಯಿಂದ ಶ್ರೇಷ್ಠ ದೈಹಿಕ ಶಿಕ್ಷಣ ಶಿಕ್ಷಕ, ಶ್ರೇಷ್ಠ ಚಿತ್ರಕಲಾ ಶಿಕ್ಷಕ ಹಾಗೂ ಶ್ರೇಷ್ಠ ಬೋಧಕೇತರ ಸಿಬ್ಬಂದಿ ಪ್ರಶಸ್ತಿಗಳನ್ನು ಪ್ರದಾನಿಸಲಾಯಿತು.

ಕಾರ್ಯಕ್ರಮದಲ್ಲಿ ನೂತನ ವಿದ್ಯಾಲಯ ಸಂಸ್ಥೆಯ ವಿವಿಧ ಶಾಲೆ ಹಾಗೂ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಗೌರವಿಸಿ ಸನ್ಮಾನಿಸಲಾಯಿತು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿಯ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ. ರಾಜೀವ ಜೋಶಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನೂತನ ವಿದ್ಯಾಲಯ ಸಂಸ್ಥೆಯ ಅಧ್ಯಕ್ಷ ಡಾ. ಗೌತಮ ಆರ್. ಜಹಗೀರದಾರ ಅಧ್ಯಕ್ಷತೆ ವಹಿಸಿದ್ದರು.

ನೂತನ ವಿದ್ಯಾಲಯ ಸಂಸ್ಥೆಯ ಶೈಕ್ಷಣಿಕ ಮತ್ತು ಪ್ರಶಸ್ತಿ ಸಮಿತಿ ಅಧ್ಯಕ್ಷೆ ಡಾ. ಮೀನಾ ಪ ದೇಶಪಾಂಡೆ, ಸಂಸ್ಥೆಯ ಕಾರ್ಯದರ್ಶಿ ಅಭಿಜೀತ ಎ. ದೇಶಮುಖ ಸೇ-ರಿದಂತೆ ಸಂಸ್ಥೆಯ ಪದಾಧಿಕಾರಿಗಳು, ಗಣ್ಯರು, ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಶಿಕ್ಷಕರ ಸೇವೆ, ಶೈಕ್ಷಣಿಕ ಕೊಡುಗೆ ಹಾಗೂ ಸಂಸ್ಥೆಯ ಅಭಿವೃದ್ಧಿಗೆ ಅವರು ನೀಡುತ್ತಿರುವ ಅಮೂಲ್ಯ ಸೇವೆಯನ್ನು ಗುರುತಿಸಿ ಗೌರವಿಸುವ ಮೂಲಕ ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

## ಶಿಕ್ಷಕರು ಸೈನಿಕರಂತೆ ಕಾರ್ಯನಿರ್ವಹಿಸಬೇಕು:ಸಿದ್ಧಲಿಂಗ ಮಲಶೆಟ್ಟಿ

ಕಲಬುರಗಿ: ದೇಶದ ಸದೃಢ ಹಾಗೂ ಸಂಸ್ಕಾರವಂತ ಪ್ರಜೆಗಳನ್ನು ನಿರ್ಮಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಶಿಕ್ಷಕರು ಸೈನಿಕರಂತೆ ಶಿಸ್ತು, ಬದ್ಧತೆ ಮತ್ತು ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸಬೇಕು ಎಂದು ಸಿದಲಿಂಗ ಮಲಶೆಟ್ಟಿ ಹೇಳಿದರು. ಉದನೂರು ಅಪ್ಪಾಜಿ ಗುರುಕುಲ ಆಂಗ್ಲ ಮಾಧ್ಯಮ ಶಾಲೆ ವತಿಯಿಂದ ಗುರುಕುಲ ಸಭಾಭವನದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರು ಮತ್ತು ಮಾಜಿ ಸೈನಿಕರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಉತ್ತಮ ಭಾರತ ನಿರ್ಮಾಣಕ್ಕೆ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ, ಶಿಸ್ತು ಮತ್ತು ದೇಶಭಕ್ತಿಯ ಮೌಲ್ಯಗಳನ್ನು ಬೆಳೆಸಬೇಕು ಎಂದರು.



ವಿ.ಎಸ್. ಇಂಡಿ ಮಾತನಾಡಿ, ವಿದ್ಯಾರ್ಥಿಗಳ ಜೀವನದಲ್ಲಿ ಗುರುವಿನ ಮಾರ್ಗದರ್ಶನ ಅತ್ಯಂತ ಮುಖ್ಯ. ಗುರುಗಳ ಸರಿಯಾದ ಮಾರ್ಗದರ್ಶನ ದೊರೆತಾಗ ಮಾತ್ರ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಈರಣ್ಣ ಇಂಡಿ, ವಿದ್ಯಾರ್ಥಿಗಳ ಸಾಧನೆಗೆ ಗುರುವಿನ ಆಶೀರ್ವಾದ ಮತ್ತು ಪ್ರೋತ್ಸಾಹ ಬಹಳ ಮುಖ್ಯ. ಗುರುವಿನ ಕರುಣೆ ಹಾಗೂ ಮಾರ್ಗದರ್ಶನ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರಾದ ಸೂರ್ಯಕಾಂತ್ ಮಠೇಕರ್, ಅಣ್ಣಪ್ಪ ಭೀಮಶೆಟ್ಟಿ ಹಾಗೂ ಶಿವಾನಂದ ಪಾಟೀಲ್ ಮತ್ತು ಮಾಜಿ ಸೈನಿಕರಾದ ಸಿದ್ದಲಿಂಗಪ್ಪ ಆರ್. ಮಲಶೆಟ್ಟಿ ಹಾಗೂ ಅಮೃತ್ ವಿಠ್ಠಲ್ ರೇವೂರ್ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ಸಂಸ್ಥಾಪಕ ಕಾರ್ಯದರ್ಶಿ ರಾಜಕುಮಾರ್ ಬಿ. ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕರ ದಿನಾಚರಣೆಯ ಅಂಗವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಆಟೋಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಶಿಕ್ಷಕರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಸ್ಫೂರ್ತಿ ಮತ್ತು ಶಿವಾನಿ ನಡೆಸಿಕೊಟ್ಟರು. ಕುಮಾರಿ ಅಮೂಲ್ಯ ವಂದಿಸಿದರು.

ಕಾರ್ಯಕ್ರಮದಲ್ಲಿ ಧರ್ಮರಾಜ್ ಮಂದಾಪುರ್, ಸಿದ್ದಲಿಂಗಯ್ಯ ಸ್ಥಾವರಮಠ, ಬಸವರಾಜ್ ಇಂಗ್ಲೀಶ್ವರ್, ಸಂಸ್ಥೆಯ ಅಧ್ಯಕ್ಷೆ ಭಾಗಮ್ಮ ರಾಜಕುಮಾರ್, ಶಿಕ್ಷಕರಾದ ರಾಹುಲ್, ಶರಣು, ವೈಷ್ಣವಿ, ಶಶಿಕಲಾ, ಅಶ್ವಿನಿ, ದೀಪಾವಳಿ, ಸಾವಿತ್ರಿ ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಡಾ.ಮುಜಾವರ ಗೆ ರಾಜೀವ್ ಗಾಂಧಿ ಶ್ರೇಷ್ಠ ಶಿಕ್ಷಕ ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಶಿಕ್ಷಕರ ಘಟಕವು ಕೊಡಮಾಡುವ ಮಾಜಿ ಪ್ರಧಾನಿ ರಾಜೀವ್ ಗಾಂಧಿ ರಾಜ್ಯ ಮಟ್ಟದ ಶ್ರೇಷ್ಠ ಶಿಕ್ಷಕ ಪ್ರಶಸ್ತಿಯು, ಜಿಲ್ಲೆಯ ಬಬಲೇಶ್ವರ ತಾಲೂಕಿನ ಸಾರವಾಡ ಗ್ರಾಮದ ಎಲೆಮರೆ ಕಾಯಿಯಂತಿರುವ ಯುವ ಬರಹಗಾರ, ಯುವ ಇತಿಹಾಸಕಾರರಾಗಿರುವ ಡಾ. ಎಂ.ಎಸ್ ಮುಜಾವರ್ ಅವರಿಗೆ ದೊರೆತಿದೆ. ಡಾ. ಎಂ-ಎಸ್ ಮುಜಾವರ್ ಅವರು ಗ್ರಾಮೀಣ ಪ್ರದೇಶದಲ್ಲಿ ಹುಟ್ಟು ಬೆಳೆದು ಸಾರವಾಡ ಗ್ರಾಮದ ಮೊದಲ ಪಿ.ಹೆಚ್.ಡಿ ಪದವೀಧರರು. ಸ್ವಾತಂತ್ರ್ಯ ನಂತರ ಕರ್ನಾಟಕದಲ್ಲಿ ಮುಸ್ಲಿಂ ರಾಜಕೀಯ ಎಂಬ ವಿಷಯದ ಕುರಿತು ಪ್ರಬಂಧವನ್ನು ಮಂಡಿಸಿ ಡಾಕ್ಟರೇಟ್ ಪದವಿಯನ್ನು ಪಡೆದವರು. ಅಷ್ಟೇ ಅಲ್ಲದೆ, ವಿಜಯಪುರ ಸುತ್ತಮುತ್ತಲಿನ ಆದಿಲ್ ಶಾಹಿ ಸ್ಮಾರಕಗಳ ಕುರಿತು ಅಧ್ಯಯನ ಮಾಡಿ ಎಂಫಿಲ್ ಪದವಿ ಪಡೆಯುವ ಮೂಲಕ ಇತಿಹಾಸ ಕ್ಷೇತ್ರದಲ್ಲಿ ಪಾದಾರ್ಪಣೆಯನ್ನು ಮಾಡಿದವರು. ಇದರೊಂದಿಗೆ ಪದವಿ ಸ್ನಾತಕೋತ್ತರ ಪದವಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆ ತಯಾರಿಯಲ್ಲಿರುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪ್ರಾಚೀನ, ಮಧ್ಯ, ಆಧುನಿಕ, ಕರ್ನಾಟಕ, ದಕ್ಷಿಣ ಭಾರತ, ಇತಿಹಾಸ ಲೇಖನ ಕಲೆ,ಯೂರೋಪಿನ ಇತಿಹಾಸ, ಆದಿಲ್ ಶಾಹಿ ಇತಿಹಾಸ ಹೀಗೆ ಹಲವಾರು ವಿಷಯಗಳ ಕುರಿತು 25ಕ್ಕೂ ಹೆಚ್ಚು ಕೃತಿಗಳನ್ನು ಮತ್ತು 30ಕ್ಕೂ ಹೆಚ್ಚು ಲೇಖನಗಳು ಹಾಗೂ 100ಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿ ಲಕ್ಷಾಂತರ ವಿದ್ಯಾರ್ಥಿಗಳ ಮೆಚ್ಚುಗೆಯನ್ನು ಪಡೆದವರು.

ಇಷ್ಟೆಲ್ಲಾ ಸಾಧನೆಯನ್ನು ಮಾಡಿದ್ದರೂ ಇವರು ಯಾವತ್ತೂ ಪ್ರಶಸ್ತಿಯನ್ನು ಬಯಸಿ ಯಾರ ಬಳಿಯು ಹೋದವರಲ್ಲ. ಆದರೆ ಇಂತಹ ಎಲೆಮರೆ ಕಾಯಿ ಯಂತಿರುವ ಇವರ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಶಿಕ್ಷಕರ ಘಟಕವು ಮಾಜಿ ಪ್ರಧಾನಿ ರಾಜೀವಗಾಂಧಿ ರಾಜ್ಯ ಮಟ್ಟದ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ನೀಡಿರುವುದು, ವಿಜಯಪುರ ಜಿಲ್ಲೆಯ ಕೀರ್ತಿ ಹೆಚ್ಚಿಸಿದೆ ಎಂದು ವಿಜಯಪುರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಸರ್ಪರಾಜ ಮಿರ್ದೇ ಹೇಳಿದರು.

ಆಶಿಫ್ ಭಗವಾನ, ನಜೀರ್ ಶೇಕ್ , ಭೀಮಾಶಂಕರ್, ಮಲ್ಲಿಕಾರ್ಜುನ್ ಸಿಂಗೆ ಇತರರು ಡಾ.ಎಂ ಎಸ್ ಮುಜಾವರ್ ಅವರಿಗೆ ಅಭಿನಂದನೆ ಸಲ್ಲಿಸಿದರು.



# ಬಂಗ್ಲೆ ಮಲ್ಲಿಕಾರ್ಜುನ ಮೇಲೆ ಕ್ರಿಮಿನಲ್ ಮೊಕದ್ದಮೆಗೆ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

■ ಕಾರ್ಯನಿರತ ಪತ್ರಕರ್ತರ ಸಂಘದ ವಿಜಯಪುರ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಕೆ ।

ಕಾನಿಪ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ ಒತ್ತಾಯ

ವಿಜಯಪುರ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಬಗ್ಗೆ ಸ್ವಯಂಘೋಷಿತ ಅಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ನೇತೃತ್ವದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಹೆಸರಿನಲ್ಲಿ ದೂರು ನೀಡಿರುವುದನ್ನು ಖಂಡಿಸಿ, ಬಂಗ್ಲೆ ಮಲ್ಲಿಕಾರ್ಜನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗ್ರಹಿಸಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದಿಂದ ಮಂಗಳವಾರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಸಂಘದ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ ಮಾತನಾಡಿ, ಬಂಗ್ಲೆ ಮಲ್ಲಿಕಾರ್ಜುನ ಅವರು ಸರ್ಕಾರಿ ಅಧಿಕಾರಿಗೆ ಬೆದರಿಕೆ ಹಾಕಿದ ಬಗ್ಗೆ ಬಳ್ಳಾರಿಯ ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಿರಗುಪ್ಪದಲ್ಲೂ ಪೊಲೀಸ್ ಪ್ರಕರಣ ದಾಖಲಾದ ಬಳಿಕ ಊರು ತೊರೆದಿರುತ್ತಾರೆ. ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಘಟನೆಯೊಂದರಲ್ಲಿ ಸಾರ್ವಜನಿಕವಾಗಿ ಕ್ಷಮೆ ಕೇಳಿ ಬಚಾವ್ ಆಗಿರುವುದು ಹಸಿಹಸಿಯಾಗಿದೆ. ಇಂಥಹ ಹಿನ್ನೆಲೆಯ ಬಂಗ್ಲೆ ಮಲ್ಲಿಕಾರ್ಜುನ ಅವರು, ಚುನಾವಣಾ ಪ್ರಕ್ರಿಯೆ ಮೂಲಕ ಅಯ್ಕೆಯಾಗಿರುವ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಬಗ್ಗೆ ಇಲ್ಲಸಲ್ಲದ ದೂರು ನೀಡಿರುವುದು ಖಂಡನೀಯ. ಕಾರಣ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಿದರು.ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ ಮಾತನಾಡಿ, ಕೆಯುಡಬ್ಲ್ಯೂಜೆ, ಸರ್ಕಾರದ ಅನೇಕ ಕಾರ್ಯಕ್ರಮಗಳಲ್ಲಿ ಸಹಯೋಗ ಹೊಂದಿದ್ದು, ಸರ್ಕಾರದ ಮಾನ್ಯತೆ ಹೊಂದಿರುವ ಪತ್ರಕರ್ತರ ಏಕೈಕ ಸಂಘಟನೆಯಾಗಿದೆ. ಸಂಘದ ಮತ್ತು ಪತ್ರಕರ್ತರ ಶ್ರೇಯೋಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ರಾಜ್ಯಾಧ್ಯಕ್ಷ ಶಿವಾನಂದ ತಗಡೂರ ಅವರ ಮೇಲಿನ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ. ಉದ್ದೇಶಪೂರ್ವಕವಾಗಿ ಅವರ ತೇಜೋವಧೆಗೆ ಮುಂದಾಗಿರುವ ಬಂಗ್ಲೆ ಮಲ್ಲಿಕಾರ್ಜನ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯಕಾರಿ ಸದಸ್ಯ ಪ್ರಕಾಶ ಬೆಣ್ಣೂರ, ಜಿಲ್ಲಾ ಉಪಾಧ್ಯಕ್ಷರಾದ ಶಶಿಕಾಂತ ಮೆಂಡೆಗಾರ, ಬಸವರಾಜ ಉಳ್ಳಾಗಡ್ಡಿ, ಸಮೀರ ಇನಾಮದಾರ, ಜಿಲ್ಲಾ ಖಜಾಂಚಿ ರಾಹುಲ ಆಪ್ಟೆ, ಜಿಲ್ಲಾ ಕಾರ್ಯದರ್ಶಿ ಸದ್ದಾಂ ಜಮಾದಾರ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಗುರು ಗದ್ದನಕೇರಿ, ಸಂಜೀವ ಕುಲಕರ್ಣಿ, ಗೋಪಾಲ ಕನಿಮಣಿ, ಶಂಕರ ಜಲ್ಲಿ, ಶಿವಾನಂದ ಶಿವಶರಣ, ಸುರೇಶ ತೇರದಾಳ, ಪ್ರಭು ಕುಮಟಗಿ, ಪತ್ರಕರ್ತರಾದ ಷಡಕ್ಷರಿ ಕಂಪೂನವರ, ಪ್ರದೀಪ್ ಕುಲಕರ್ಣಿ, ಸುನೀಲ ಗೋಡೆನ್ನವರ, ಚಂದ್ರಕಾಂತ ಮಾವೂರ, ರವಿ ಜಹಾಗೀರದಾರ ಸೇರಿದಂತೆ ಹಲವರಿದ್ದರು.

# ವಿಜಯಪುರ ಜಿಲ್ಲೆ ಬರಗಾಲ ಪೀಡಿತ ಜಿಲ್ಲೆಯಾಗಿ ಘೋಷಿಸಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮಳೆಯ ಕೊರತೆಯಿಂದಾಗಿ ಜಿಲ್ಲೆಯ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ವಿಜಯಪುರ ಜಿಲ್ಲೆಯನ್ನು ಸಂಪೂರ್ಣ ಬರಗಾಲ ಪೀಡಿತ ಜಿಲ್ಲೆಯಾಗಿ ಘೋಷಿಸಿ, ಸಂಕಷ್ಟದಲ್ಲಿರುವ ರೈತರಿಗೆ ತಕ್ಷಣ ಬರ ಪರಿಹಾರ ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ಭೀಮ್ ರಾಜ್ಯ ದಲಿತ್ ಸೇವಾ ಸಮಿತಿ (ರಿ.), ಬೆಂಗಳೂರು ರಾಜ್ಯ ಮಹಿಳಾ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಸಮಿತಿಯ ರಾಜ್ಯ ಮಹಿಳಾ ಅಧ್ಯಕ್ಷೆ ನೀಲಾಂಬಿಕಾ ಕಟ್ಟಿಮನಿ ಹಾಗೂ ಅಲ್ಪಸಂಖ್ಯಾತ ಘಟಕದ ರಾಜ್ಯಾಧ್ಯಕ್ಷೆ ಸಲ್ಮಾ ಮೈರಾಗೋಳ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಿ, ವಿಜಯಪುರ ಜಿಲ್ಲೆಯ ರೈತರ ಸಂಕಷ್ಟಕ್ಕೆ ತಕ್ಷಣ ಸ್ಪಂದಿಸುವಂತೆ ಒತ್ತಾಯಿಸಲಾಯಿತು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ವಿಜಯಪುರ ಜಿಲ್ಲಾ ಘಟಕದ ವತಿಯಿಂದ ವಿಜಯಪುರ ಜಿಲ್ಲೆಯನ್ನು ಸಂಪೂರ್ಣ ಬರಗಾಲ ಪೀಡಿತ ಜಿಲ್ಲೆಯಾಗಿ ಘೋಷಿಸುವಂತೆ ಆಗ್ರಹಿಸಿ ನಗರದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ರೈತ ಧರಣಿ ಸತ್ಯಾಗ್ರಹಕ್ಕೆ ಭೀಮ್ ರಾಜ್ಯ ದಲಿತ್ ಸೇವಾ ಸಮಿತಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.ಅಲ್ಲದೆ, ರೈತರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹದ ಬೇಡಿಕೆಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ರೈತರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಲಾಗಿದೆ.

ಈ ವೇಳೆ ಸಮಿತಿ ರಾಜ್ಯಾಧ್ಯಕ್ಷ ಅಪ್ಪುರಾಜ್ ನಿಮಾದಾರ, ರಾಜ್ಯ ಪ್ರಧಾನ ಕಾರ್ಯದರ್ಶಿ ಸೋಮಶೇಖರ ಕಬಾಡೆ, ರಾಜ್ಯ ಉಪಾಧ್ಯಕ್ಷ ವಿಜಯಕುಮಾರ ನಿಮಾದಾರ, ಜಿಲ್ಲಾಧ್ಯಕ್ಷ ನಾಗರಾಜ ಕಬಾಡೆ, ಚಂದ್ರಶೇಖರ ಕಟ್ಟಿಮನಿ, ಕಿರಣ-ಕುಮಾರ ಅಲಿಯಾಬಾದ, ರಾಘವೇಂದ್ರ ಕಾಸೆ, ಅರುಣ್ ಗುಜ್ಜಾರ್, ನೀಲಮ್ಮ ಗಡ್ಡಿ, ಶೋಭಾ ರಾಠೋಡ, ರುಕ್ಮಾಬಾಯಿ ರಾಠೋಡ, ನವೀನ ಕಾಸೆ, ಗಿರೀಶ್ ಕುಲಕರ್ಣಿ, ಸಂತೋಷ ಕಟ್ಟಿಮನಿ, ಹುಸೇನ ಹಿಪ್ಪರಗಿ ಸೇರಿದಂತೆ ಹಲವರಿದ್ದರು.

# ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಗಣೇಶೋತ್ಸವ ಆಚರಿಸಿ : ಸಿಪಿಐ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ಪ್ರತಿಯೊಂದು ಕಾರ್ಯಕ್ರಮಕ್ಕೂ ಮೊದಲು ಪೂಜೆ ಸಲ್ಲಿಸಿ ನೆನೆಯುವ ಗಣೇಶನ ಹಬ್ಬ ಬಂದಿದೆ. ಈ ಹಬ್ಬವನ್ನು ಸಾರ್ವಜನಿಕರಿಗೆ ತೊಂದರೆಯಾಗದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಆಚರಿಸಲು ಗಣೇಶೋತ್ಸವ ಸಮಿತಿಗಳು ಸಹಕರಿಸಬೇಕು ಎಂದು ಸಿಪಿಐ ಮೊಹಮ್ಮದ ಫಸಿಯುದ್ದೀನ್ ಹೇಳಿದರು.

ಪಟ್ಟಣದ ಪೊಲೀಸ್ ಠಾಣಯಲ್ಲಿ ಗಣೇಶೋತ್ಸವದ ನಿಮಿತ್ಯ ಹಮ್ಮಿಕೊಳ್ಳಲಾಗಿದ್ದ ಮೊದಲನೇ ಹಂತದ ಶಾಂತಿಪಾಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಣೇಶೋತ್ಸವವು ಎಲ್ಲರನ್ನೂ ಒಗ್ಗೂಡಿಸುವ ಹಬ್ಬವಾಗಿದ್ದು, ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಶಾಂತಿಯುತವಾಗಿ ಆಚರಿಸಬೇಕು. ಗಣೇಶ ಮೂರ್ತಿ ಪ್ರತಿಷ್ಠಾಪನೆ, ಮೆರವಣಿಗೆ ಹಾಗೂ ವಿಸರ್ಜನೆ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕಾನೂನು ಉಲ್ಲಂಘಿಸುವವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂಬ ಎಚ್ಚರಿಕೆಯ ಸಂದೇಶವನ್ನು ರವಾನಿಸಿದರು.

ಈ ವೇಳೆ ನೂತನವಾಗಿ ಅಧಿಕಾರ ವಹಿಸಿಕೊಂಡ ಪಿಎಸ್ಐ ವಿಜಕುಮಾರ ತಳವಾರ ಮಾತನಾಡಿ, ಗಣೇಶೋತ್ಸವ ಸಮಿತಿಗಳು ಮುಂಚಿತವಾಗಿ ಅಗತ್ಯ ಅನುಮತಿಗಳನ್ನು ಪಡೆದುಕೊಳ್ಳಬೇಕು. ಮೆರವಣಿಗೆ ಸಂದರ್ಭದಲ್ಲಿ ನಿಗದಿತ ಮಾರ್ಗ ಹಾಗೂ ಸಮಯವನ್ನು ಪಾಲಿಸುವುದರ ಜೊತೆಗೆ, ಯಾವುದೇ ರೀತಿಯ ಗಲಾಟೆ ಅಥವಾ ಸಂಘರ್ಷಕ್ಕೆ ಅವಕಾಶ ನೀಡಬಾರದು. ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ವದಂತಿಗಳಿಗೆ ಕಿವಿಗೊಡದೆ, ಅನುಮಾನಾಸ್ಪದ ಬೆಳವಣಿಗೆಗಳು ಕಂಡುಬಂದರೆ ಕೂಡಲೇ ಪೊಲೀಸರ ಗಮನಕ್ಕೆ ತರಬೇಕು. ಕೆಲವು ಸಂದರ್ಭಗಳಲ್ಲಿ ಪೊಲೀಸರೇ ಬರಬೇಕು ಎಂದು ಕಾಯದೇ, ನಾಗರಿಕರು ಸಹ ಪೊಲೀಸರಂತೆ ಜವಾಬ್ದಾರಿಯಿಂದ ಕೆಲಸ ಮಾಡುವಂತೆ ತಿಳಿಸಿದರು. ಹಿಂದೂ ಕಾರ್ಯಕರ್ತ ಬಸಯ್ಯ ನಂದಿಕೇಶ್ವರಮಠ, ಗಣೇಶೋತ್ಸವ ಮಹಾ ಮಂಡಳದ ಪ್ರಮುಖರಾದ ಸಿದ್ಧರಾಜ ಹೊಳಿ, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ, ಪುರಸಭೆ ಅಧ್ಯಕ್ಷ ಮಹೆಬೂಬ ಗೊಳಸಂಗಿ, ಸಂಜು ಬಾಗೇವಾಡಿ, ಉದಯಸಿಂಗ್ ರಾಯಚೂರ, ಬಾಬಾ ಗುಡ್ನಾಳ ಮಾತನಾಡಿದರು. ಕೃಷ್ಣ ಬಿಳೇಭಾವಿ, ಪರಶುರಾಮ ನಾಲತವಾಡ, ಸದಾಶಿವ ಮಠ, ಸಂಗಣ್ಣ ನಾಲತವಾಡ, ಕಾಶಿನಾಥ ಬಿರಾದಾರ, ಸಂಗಣ್ಣ ಮೇಲಿನಮನಿ, ಆನಂದ ಬಿಜ್ಜೂರಮಠ, ಹುಸೇನ ಮುಲ್ಲಾ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

ಕ್ರೈಂ ಪಿಎಸ್ಐ ರಂಗಪ್ಪ ಭಂಗಿ ನಿರ್ವಹಿಸಿದರು.

# ಅನ್ನ ದಾಸೋಹ, ಅಂಬ್ಯುಲನ್ಸ ಸೇವೆಗೆ 3ವರ್ಷ :ಉದ್ಯಮಿ ಪೂಜಾರಿ ಹರ್ಷ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ಆರ್.ಎಸ್.ಪಿ ಸಮೂಹ ಸಂಸ್ಥೆಯಿಂದ ಪ್ರಾರಂಭಿಸಿದ ಅನ್ನ ದಾಸೋಹ ಮತ್ತು ಉಚಿತ ಅಂಬ್ಯುಲನ್ಸ ಸೇವೆ ಪ್ರಾರಂಭಗೊಂಡು ಮೂರು ವರ್ಷಗಳಾಗಿದ್ದು, ಈ ಎರಡೂ ಸೇವೆಗಳಿಂದ ಸಾವಿರಾರು ಬಡ, ನಿರ್ಗತಿಕ, ಅನಾಥರಿಗೆ ಮತ್ತು ಮಧ್ಯಮ ವರ್ಗದವರಿಗೆ ಸಾಕಷ್ಟು ಅನಕೂಲವಾಗಿದೆ ಎಂದು ಉದ್ಯಮಿ, ಆರ್.ಎಸ್.ಪಿ ಸಮೂಹ ಸಂಸ್ಥೆಯ ಅಧ್ಯಕ್ಷ ರವಿ ಪೂಜಾರಿ ಹೇಳಿದರು.

ಅವರು ಸುದ್ದಿಗೋಷ್ಟಿಯಲ್ಲಿ ಆರ್.ಎಸ್.ಪಿ ಕಛೇರಿಯಲ್ಲಿ ಮಾತನಾಡಿ, ಪ್ರಾರಂಭದಲ್ಲಿ ಇದು ಎಷ್ಟು ದಿನ ನಡೆಸಿಕೊಂಡು ಹೋಗುತ್ತಾರೋ ಎಂದು ಅನೇಕರು ಹಗುರವಾಗಿ ನಮ್ಮ ಸಂಸ್ಥೆಯ ಸೇವೆಯ ಬಗೆಗೆ ಮಾತನಾಡಿದ್ದರು ಆದರೆ ಅಥಣಿಯ ಮಹಾ ಜನತೆ, ಸಂಘ ಸಂಸ್ಥೆಗಳ ಸಹಕಾರದಿಂದ ಈ ಎರಡೂ ಸೇವೆಗಳು ಮೂರು ವರ್ಷಗಳಿಂದಲೂ ನಿರಂತರವಾಗಿ ಮುನ್ನಡೆಯುತ್ತಿವೆ ಎಂದು ಹರ್ಷ ವ್ಯಕ್ತಪಡಿಸಿದರು. ನಗರ ಸಭೆ ಸದಸ್ಯ ರಾವಸಾಹೇಬ ಐಹೊಳೆ ಮಾತನಾಡಿ, ಉದ್ಯಮಿ ರವಿ ಪೂಜಾರಿ ಅನೇಕ ವರ್ಷಗಳಿಂದಲೂ ಅನಾಥ, ಬಡವರಿಗೆ ನಿರಂತರ ದಾಸೋಹ, ಅಂಬ್ಯುಲನ್ಸ ಸೇವೆಯಂತಹ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಾಮಾಜಿಕ ಬದ್ಧತೆ ತೋರಿದ್ದಾರೆ ಎಂದರು.

ಸಾಹಿತಿ ಅಪ್ಪಾಸಾಹೇಬ ಅಲಿಬಾದಿ ಮಾತನಾಡಿ, ರವಿ ಪೂಜಾರಿ ಉದ್ಯಮಿಯಾಗಿ, ಚಿತ್ರ ನಿರ್ಮಾಪಕರಾಗಿ, ನಟನಾಗಿ ಇವೆಲ್ಲವುದಕ್ಕಿಂತ ಸಾಮಾಜಿಕ ಕಾರ್ಯಕರ್ತನಾಗಿ ಅಥಣಿಯಲ್ಲಷ್ಟೇ ಅಲ್ಲ ಇಡೀ ಜಿಲ್ಲೆಯಲ್ಲಿ ಗುರುತಿಸಿಕೊಂಡಿದ್ದಾರೆ ಎಂದು ಹೇಳಿದರು. ಯುವ ಧುರೀಣರಾದ ಗುರು ಆಜೂರ ಮತ್ತು ಹಣಮಂತ ವಣಜೋಳ ಮಾತನಾಡಿದರು. ಈ ಸಂದರ್ಭದಲ್ಲಿ ಧುರೀಣರಾದ ಸಿದ್ದು ಪಾಟೀಲ, ಪ್ರಕಾಶ ಹಿಡಕಲ್, ಚಿದಾನಂದ ಶೇಗುಣಸಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ವಿಜಯಪುರದಲ್ಲಿ ಹಿರಿಯ ಸಾಹಿತಿ ಡಾ.ಚನ್ನಪ್ಪ ಕಟ್ಟಿ ಅವರ ಎರಡು ಕೃತಿಗಳು ಲೋಕಾರ್ಪಣೆ

# ಅನುವಾದದ ಅಂತಿಮ ಗುರಿ ಅನುಸೃಷ್ಟಿ :ಕುಲಕರ್ಣಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಅನುವಾದವೆನ್ನುವುದು ಕೇವಲ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ತರ್ಜುಮೆಗೊಳಿಸುವುದಲ್ಲ. ಅದೊಂದು ಅನುಸೃಷ್ಟಿಯ ಸೃಜನ ಕ್ರಿಯೆ ಎಂದು ವಿಜಯಪುರದ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದಲ್ಲಿ ಡಾ.ಚನ್ನಪ್ಪ ಕಟ್ಟಿ ಅವರ ಎರಡು ಕೃತಿಗಳನ್ನು ಲೋಕಾರ್ಪಣೆಗೊಳಿಸಿದ ಹಿರಿಯ ವಿದ್ವಾಂಸರಾದ ಡಾ.ಆರ್.ಕೆ.ಕುಲಕರ್ಣಿ ಅವರು ಅಭಿಪ್ರಾಯಪಟ್ಟರು.

ಕಟ್ಟಿ ಅವರು ಅನುವಾದಿಸಿದ "ಐರಿಶ್ ಜನಪದ ಕತೆಗಳು" ಮತ್ತು ಅವರು ಬರೆದ "ಪ್ರತಿನುಡಿ" ಅಂದು ಲೋಕಾರ್ಪಣೆಗೊಂಡ ಎರಡು ಕೃತಿಗಳು. ವಿಶ್ವದಾದ್ಯಂತ ಪ್ರಚಲಿತವಿರುವ ಜನಪದ ಕತೆಗಳು ಸಮಾನವಾದ ಆಶಯಗಳನ್ನು ಹೊಂದಿರುತ್ತವೆ. ಅಂಥ ಮಹತ್ವದ ಸಂಗತಿಯನ್ನು ಸಮರ್ಥಿಸುವಂತೆ ಇಲ್ಲಿನ ಜನಪದ ಕತೆಗಳಿವೆ ಎಂದು ಕುಲಕರ್ಣಿ ವಿವರಿಸಿದರು. "ಪ್ರತಿನುಡಿ" ವಿಮರ್ಶಾ ಗ್ರಂಥದ ಪರಿಚಯ ಮಾಡಿದ ವಿಶ್ರಾಂತ ಪ್ರಾಚಾರ್ಯರಾದ ಡಾ.ಜಿ.ಆರ್. ಕುಲಕರ್ಣಿ ಅವರು, ಪ್ರಸ್ತುತ ಕೃತಿಯು ಕಟ್ಟಿ ಅವರ ವ್ಯಾಪಕ ಅಧ್ಯಯನ ಹಾಗೂ ಸಮಚಿತ್ತದ ವಿಮರ್ಶೆಗೆ ಉತ್ತಮ ಮಾದರಿಯಾಗಿದೆ ಎಂದು ಹೇಳಿದರು. ನೆಲೆ ಪ್ರಕಾಶನ ಸಂಸ್ಥೆಯ ಸಂಸ್ಥಾಪಕ ಸದಸ್ಯರಾದ ಡಾ.ಎಂ. ಎಂ.ಪಡಶೆಟ್ಟಿ ಅವರು ಪ್ರಾಸ್ತಾವಿಕ ಮಾತನಾಡಿ, ಪ್ರಕಾಶನ ಸಂಸ್ಥೆ ನಡೆದು ಬಂದ ದಾರಿಯನ್ನು ಪರಿಚಯಿಸಿದರು. ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿ ಡಾ. ಎಂ.ಎಸ್.ಮದಭಾವಿ ಅಧ್ಯಕ್ಷತೆ ವಹಿಸಿದ್ದರು. ಚಿದಂಬರ ಬಂಡಗರ ಸ್ವಾಗತಿಸಿದರು. ದೇವೂ ಮಾಕೊಂಡ ವಂದಿಸಿದರು. ಡಾ.ಎಸ್.ಕೆ.ಕನ್ನೂರ ನಿರೂಪಿಸಿದರು.

## ಸಾಯಬಣ್ಣ ಮಾದರ ಅವರ 'ದೇವರ ದ್ಯಾಮವ್ವ' & ಪರವೀನಬಾನು ಶೇಖ ಅವರ 'ದ್ಯುತಿ ಸಿಂಚನ' ಕೃತಿಗಳ ಲೋಕಾರ್ಪಣೆ । ಬೆಳಗಾವಿ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ ಅಭಿಮತ

# 'ದೇವರ ದ್ಯಾಮವ್ವ' ಕೃತಿ ಕನ್ನಡ ಸಾಹಿತ್ಯಕ್ಕೆ ಅಪರೂಪದ ಕೊಡುಗೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಪ್ರಸ್ತುತ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಥಾ ಸಂಕಲನಗಳು ಅಪರೂಪವಾಗುತ್ತಿದ್ದು, ಈ ಸಂದರ್ಭದಲ್ಲಿ ಸಾಹಿತಿ ಸಾಯಬಣ್ಣ ಮಾದರ ಅವರ 'ದೇವರ ದ್ಯಾಮವ್ವ ಹಾಗೂ ಇತರ ಕಥೆಗಳು' ಕಥಾ ಸಂಕಲನವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪರೂಪದ ಕೊಡುಗೆಯಾಗಿದೆ ಎಂದು ಬೆಳಗಾವಿ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿಯವರು ಅಭಿಪ್ರಾಯಪಟ್ಟರು.

ನಗರದ ಕನಕದಾಸ ಬಡಾವಣೆಯ ಗಾಂಧಿ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜಿಸಿದ್ದ ಸಾಯಬಣ್ಣ ಮಾದರ ಅವರ 'ದೇವರ ದ್ಯಾಮವ್ವ' ಕಥಾ ಸಂಕಲನ ಹಾಗೂ ಪರವೀನಬಾನು ಶೇಖ ಅವರ 'ದ್ಯುತಿ ಸಿಂಚನ' ಹನಿಗವನ ಸಂಕಲನಗಳ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಕ್ಷಣಿಕ ಸಾಹಿತ್ಯ ಸೃಷ್ಟಿಯ ನಡುವೆ ಕಥೆ ಕಟ್ಟುವುದು ಅತ್ಯಂತ ಕಠಿಣವಾದ ಕೆಲಸವಾಗಿದೆ. ಕಥೆ ರಚನೆಗೆ ಸೃಜನಶೀಲತೆ, ಏಕಾಗ್ರತೆ ಹಾಗೂ ಆಳವಾದ ಜ್ಞಾನ ಅಗತ್ಯ. ಕಥೆ ಕಟ್ಟುವಿಕೆ ಆಳವಾದ ಧ್ಯಾನ ಮತ್ತು ಏಕಾಗ್ರತೆಯನ್ನು ಬಯಸುತ್ತದೆ. ಅವಸರದ ಕಾವ್ಯಕ್ಕೆ ಇಲ್ಲಿ ಅವಕಾಶವಿಲ್ಲ. ಇಂತಹ ಕಠಿಣ ಹಾಗೂ ಅದ್ಭುತ ಕಾರ್ಯವನ್ನು ಸಾಯಬಣ್ಣ ಮಾದರ ಅವರು ತಮ್ಮ 'ದೇವರ ದ್ಯಾಮವ್ವ' ಕಥಾ ಸಂಕಲನದ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ ಎಂದು ಹೇಳಿದರು.

ಸಾಹಿತ್ಯವು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಜನರ ನೋವು, ಸಮಸ್ಯೆಗಳಿಗೆ ಧ್ವನಿಯಾಗಿ, ಪರಿಹಾರದ ಮಾರ್ಗವನ್ನು ತೋರಿಸುವಂತಿರಬೇಕು. ದಮನಿತರ ಧ್ವನಿಯಾಗುವಂತಹ ಸಾಹಿತ್ಯ ರಚನೆಯಾಗಿರುವುದು ಸಂತಸದ ಸಂಗತಿ. ಕನ್ನಡ ಸಾಹಿತ್ಯ ಪರಿಷತ್ತು ಎಲ್ಲರನ್ನೂ ಒಳಗೊಳ್ಳುವ ಮೂಲಕ ಸಾಹಿತ್ಯಿಕ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುತ್ತಿರುವುದು ಶ್ಲಾಘನೀಯ. ಇಂತಹ ಕೃತಿಗಳು ಪರಿಷತ್ತಿನ ವೇದಿಕೆಯಲ್ಲಿ ಬಿಡುಗಡೆಯಾಗಿರುವುದರಿಂದ ಕೃತಿಗೂ ಗೌರವ ದೊರೆತಂತಾಗಿದೆ ಎಂದು ಬಾಗಲಕೋಟ ವಿವಿ, ಜಮಖಂಡಿ ಕುಲಸಚಿವ ಸೋಮಲಿಂಗ ಗೆಣ್ಣೂರ ಹೇಳಿದರು.

ಕೃತಿಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಓದುವ ಹಾಗೂ ಗ್ರಂಥ ಸಂಗ್ರಹಿಸುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕವಿಗಳು, ಲೇಖಕರು ಹಾಗೂ ಉಪನ್ಯಾಸಕರಿಗೆ ಸೂಕ್ತ ಅವಕಾಶ ಕಲ್ಪಿಸುವ ಮೂಲಕ ಅವರಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದರು.

ಕಸಾಪ ತಿಕೋಟಾ ಘಟಕದ ಅಧ್ಯಕ್ಷ ಸಿದ್ರಾಮಯ್ಯ ಲಕ್ಕುಂಡಿಮಠ, ಲೇಖಕ ಸಾಯಬಣ್ಣ ಮಾದರ ಹಾಗೂ ಕವಯತ್ರಿ ಪರವೀನಬಾನು ಶೇಖ ಮಾತನಾಡಿದರು.

'ದ್ಯುತಿ ಸಿಂಚನ' ಹನಿಗವನ ಸಂಕಲನದ ಕುರಿತು ಕಸಾಪ ಗೌರವ ಕಾರ್ಯದರ್ಶಿ ಶಿಲ್ಪಾ ಭಸ್ಮೆ ಕೃತಿ ಪರಿಚಯ ಮಾಡಿದರು.

'ದೇವರ ದ್ಯಾಮವ್ವ' ಕಥಾ ಸಂಕಲನದ ಕುರಿತು ಸಾಹಿತಿ ಮಮತಾ ಮುಳಸಾವಳಗಿ ವಿಮರ್ಶೆ ಮಾಡಿದರು.

ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ, ವಿಜಯಲಕ್ಷ್ಮೀ ಹಳಕಟ್ಟಿ, ಜಿ.ಎಸ್. ಬಳ್ಳೂರ, ಎಂ.ಬಿ. ಕಟ್ಟಿಮನಿ, ಬಸನಗೌಡ ಬಿರಾದಾರ, ಲತಾ ವಾಲಿಕಾರ, ಗಂಗಮ್ಮ ರಡ್ಡಿ, ಮಲ್ಲಿಕಾರ್ಜುನ ಕೆಳಗಡೆ, ರುದ್ರಮ್ಮ ಗಿಡ್ಡಪ್ಪಗೋಳ, ಡಾ. ಎಂ.ಎ. ಗದ್ಯಾಳ, ಭಗವಂತ ಜಿಗಜಿಣಗಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಪ್ರಕಾಶ ಹಿರೇಕೊಪ್ಪ, ಪರಶುರಾಮ ಚಲುವಾದಿ, ಶಿವಾಜಿ ಮೋರೆ, ಶ್ರೀಕಾಂತ ನಾಡಗೌಡ, ರವಿ ಕಿತ್ತೂರ, ಮಂಜುಳಾ ಕಾಳಗಿ, ಸದಾನಂದ ಬಡಿಗೇರ, ಸಿದ್ದು ಶೇಟಗಾರ, ಅಜೀಜಾ ಶೇಖ, ನಿಖಿತಾ ಕಳಗಿನಮನಿ, ಕಾಳಪ್ಪ ಪತ್ತಾರ, ಸಚಿಂದ್ರ ಲಂಬು, ಮಿಲನ ಹೊಸಕೋಟೆ, ಕಿರಣ ಕುರಿಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಶಿಕಲಾ ನಾಯ್ಕೋಡಿ ಗೀತಗಾಯನ ನಡೆಸಿಕೊಟ್ಟರು. ಮೌನೇಶ್ವರ ಬಡಿಗೇರ ಸ್ವಾಗತಿಸಿ ಗೌರವಿಸಿದರು. ಪ್ರಾಧ್ಯಾಪಕ ರಾಜಶೇಖರ ಕಂಬಾರ ನಿರೂಪಿಸಿದರು. ಡಾ. ಆನಂದ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎ.ಎಂ. ಹಳ್ಳೂರ ವಂದಿಸಿದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR